

# ನಿಸರ್ಗದ ನಿಷ್ಠಾವಂತ ಹಾಗೂ ನಿಖರ ಚರಿತ್ರಕಾರ

ವರುಣ್ ಶರ್ಮ

**ಮಗುವಿನ ಕುತೂಹಲ ಮತ್ತು ಉತ್ಸುಕತೆಯೊಂದಿಗೆ ನೈಸರ್ಗಿಕ ಜಗತ್ತನ್ನು ಅವಲೋಕಿಸುವುದು ಎಂದರೇನು? ಅಚ್ಚರಿಯ ಭಾವವನ್ನು ಉಳಿಸಿಕೊಳ್ಳುತ್ತಲೇ ಇಂತಹ ಅವಲೋಕನೆಗಳನ್ನು ನಾವು ನಿಖರವಾಗಿ ದಾಖಲಿಸುವುದು ಹೇಗೆ? ನೈಸರ್ಗಿಕ ಜಗತ್ತಿನೊಂದಿಗಿನ ನಮ್ಮ ಸಂಬಂಧಕ್ಕೆ ಶಿಕ್ಷಣವು ಹೇಗೆ ರೂಪ ನೀಡುತ್ತದೆ? ನಾವು ಕೆಲವು ಪ್ರಭೇದಗಳಿಗೆ ಉಳಿದ ಪ್ರಭೇದಗಳಿಗಿಂತ ಹೆಚ್ಚು ಮೌಲ್ಯ ನೀಡುವುದೇಕೆ? ಈ ಪ್ರಶ್ನೆಗಳೊಂದಿಗೆ ಇತರ ಪ್ರಶ್ನೆಗಳನ್ನೂ ಎಂ ಕೃಷ್ಣನ್ ಅವರ ಜೀವನ ಮತ್ತು ಬರಹಗಳ ಮೂಲಕ ಪರಿಶೋಧಿಸಿ.**

*"ಸಾಧಾರಣ ವಿದ್ಯಾವಂತ ವಯಸ್ಕ ವ್ಯಕ್ತಿಗೆ ಈ ದೇಶದಲ್ಲಿ ತುಂಬಿ ತುಳುಕುತ್ತಿರುವ ಸಸ್ಯ ಹಾಗೂ ಪ್ರಾಣಿಗಳ ಕುರಿತು ಇರುವ ಅರಿವು ತೀರಾ ಅಲ್ಪ ಅಥವಾ ಏನೇನೂ ಇಲ್ಲ ಹಾಗೂ ಕಾಳಜಿಯಂತೂ ಇನ್ನೂ ಕಡಿಮೆ. ಜೀವಿಗಳು ಅವನಲ್ಲಿ ಆಸಕ್ತಿ ಮೂಡಿಸುವುದಿಲ್ಲ. ಆತನಿಗೆ ಪ್ರಪಂಚವೆಂದರೆ ಮನುಷ್ಯರು ಇರುವ ತಾಣವಷ್ಟೇ. ಆತ ಎಂದಿಗೂ ಒಂದು ಬೆಟ್ಟದೊಡನೆಯಾಗಲಿ ಒಂದು ನಾಯಿಯೊಡನಾಗಲಿ ಸ್ನೇಹ ಬೆಳೆಸಲಾರ ಮತ್ತು ಅವನಿಗೆ ಮಾತನಾಡಲು ಯಾರೂ ಸಂಗಾತಿಗಳಿಲ್ಲವಾದರೆ, ಓದಲು ಪುಸ್ತಕವಿಲ್ಲವಾದರೆ, ಕೈಯಾಡಿಸಲು ಯಾವುದೇ ಗ್ಯಾಜೆಟ್ ಇಲ್ಲವಾದರೆ, ಅವನಿಗೆ ಏನೋ ಕಳೆದುಹೋದಂತನಿಸುತ್ತದೆ. ಇದಕ್ಕೆಲ್ಲವೂ ಮೂಲ ಕಾರಣ ಶಾಲಾ ಶಿಕ್ಷಣ–ಇಲ್ಲಿ ಮಕ್ಕಳಿಗೆ ಪ್ರಕೃತಿಯನ್ನು ಅರಿತುಕೊಳ್ಳುವುದನ್ನು, ಅರಿತು ಮೆಚ್ಚಿಕೊಳ್ಳುವುದನ್ನು ಕಲಿಸಲಾಗುವುದಿಲ್ಲ. ಬದಲಾಗಿ ಅದು ಪುಸ್ತಕಗಳಲ್ಲಿನ ಪದಗಳಾಗಿ, ವಿವರಗಳಾಗಿ ಉಳಿಯುತ್ತದೆ. ಅವರು ಪ್ರಕೃತಿಯನ್ನು ಪರೀಕ್ಷೆ ಉತ್ತೀರ್ಣವಾಗಲು ಇರುವುದೆಂದು ತಿಳಿಯುತ್ತಾರೆ, ದುರದೃಷ್ಟವಶಾತ್ ಅನಿವಾರ್ಯವಾದುದು ಎಂದುಕೊಂಡು. ಅವರು ಬೆಳೆದು ದೊಡ್ಡವರಾದಾಗ, ಜೀವನದ ಅರ್ಧ ಖುಷಿಯನ್ನು ಕಳೆದುಕೊಂಡಿದ್ದಾರೆ ಎನ್ನುವುದು ಅವರ ಅರಿವಿಗೆ ನಿಲುಕದೆ ಹೋಗುತ್ತದೆ"*

– ಎಂ ಕೃಷ್ಣನ್, 'ನೇಚರ್ ಸ್ಟಡಿ' (ಪ್ರಕೃತಿ ಅಧ್ಯಯನ) ಎನ್ನುವ ಲೇಖನದಲ್ಲಿ.

ಈ ಆಯ್ದ ಭಾಗಗಳು ಶಿಕ್ಷಣದ ಮೇಲೆ ಕೃಷ್ಣನ್ ಅವರ ದೃಷ್ಟಿಕೋನವನ್ನು, ಜೊತೆಗೆ ಪ್ರಕೃತಿಯ ಪ್ರಪಂಚದೊಂದಿಗೆ ಅವರ ವಿಲಕ್ಷಣವೂ, ಭಾವನಾತ್ಮಕವೂ ಹಾಗೂ ಪ್ರಾಯೋಗಿಕವೂ ಆಗಿರುವಂಥ ಅವಿನಾಭಾವ ಸಂಬಂಧವನ್ನು ನಮಗೆ ತೋರಿಸಿಕೊಡುತ್ತವೆ (**ಬಾಕ್ಸ್ 1** ನೋಡಿ).

## ಸಾಮಾನ್ಯ ವಿದ್ಯಾರ್ಥಿ

ಮಾಧವನ್ ಕೃಷ್ಣನ್ ಅವರು 1912ರ ಜೂನ್ 30 ರಂದು ತಿರುವನ್ವೇಲಿಯ ಮಧ್ಯಮವರ್ಗದ ತಮಿಳು ಬ್ರಾಹ್ಮಣ ಕುಟುಂಬದಲ್ಲಿ ಜನಿಸಿದರು

## ಬಾಕ್ಸ್ 1. ಶಿಕ್ಷಣದ ಬಗ್ಗೆ ಕೃಷ್ಣನ್ ಅವರ ದೃಷ್ಟಿಕೋನ:

ತಮ್ಮ ಪ್ರಬಂಧವಾದ 'ನೇಚರ್ ಸ್ಟಡಿ' (ಪ್ರಕೃತಿ ಅಧ್ಯಯನ)ದಲ್ಲಿ ಕೃಷ್ಣನ್ ಅವರು 'ಕೇಂದ್ರೀಕೃತ ವ್ಯವಸ್ಥೆ'ಯ ಕಲಿಕೆಯನ್ನು ಕಟುವಾಗಿ ಟೀಕಿಸಿದ್ದಾರೆ. ಅವರ ಪ್ರಕಾರ ಈ ರೀತಿಯ ಬೋಧನಾಕ್ರಮದ ದುಸ್ಸಾಹಸದಲ್ಲಿ ವಿದ್ಯಾರ್ಥಿಗಳು ತರಗತಿಯಿಂದ ತರಗತಿಗೆ ಸಾಗುತ್ತಲಿದ್ದರೂ "ಒಂದೇ ರೀತಿಯ ವಿಷಯಗಳಲ್ಲೇ ಹೆಚ್ಚು ಹೆಚ್ಚು ಬೋಧಿಸಲ್ಪಡುವುದು" ಅವರಿಗೆ ಕಂಡುಬಂತು. ಇದನ್ನು ಅವರು ಆ ಸಮಯದಲ್ಲಿ ಪ್ರತಿ ತರಗತಿಯ ಪಠ್ಯಪುಸ್ತಕದಲ್ಲೂ ಮರುಕಳಿಸುತ್ತಿದ್ದ ಹಸುವನ್ನು ಉಲ್ಲೇಖಿಸುತ್ತಾ ಹೇಳಿದರು: "ಮೊದಲ ವರ್ಷ ಮಗು ಹಸುವಿಗೆ ನಾಲ್ಕು ಕಾಲುಗಳಿವೆ *(ಚತುಷ್ಪಾದಿ)*, ನಮಗೆ ಹಾಲು ಕೊಡುತ್ತದೆ, ಮತ್ತು ಹುಲ್ಲು ತಿನ್ನುತ್ತದೆ *(ಸಸ್ಯಾಹಾರಿ)* ಎನ್ನುವುದನ್ನು ಕಲಿಯುತ್ತದೆ. ಮುಂದಿನ ವರ್ಷ *ಬಹುಶಃ ಹಾಲಿನ ಬಗ್ಗೆ ಮತ್ತು ಹಸು ಒಂದು ಸಸ್ತನಿ ಏಕೆ ಎನ್ನುವುದರ ಬಗ್ಗೆ ಪಾಠವಿರಬಹುದು. ನಾಲ್ಕನೆಯ ತರಗತಿಯಲ್ಲಿ* ಆ ಯುವ ನಿಸರ್ಗ ವಾದಿಯು ಹಸುವು ಹೇಗೆ ಮೆಲುಕು ಹಾಕುತ್ತದೆ ಮತ್ತು ಅದರ ಹೊಟ್ಟೆ *ವಿವಿಧ ಭಾಗಗಳಾಗಿದೆ* ಎನ್ನುವುದನ್ನು ಕಲಿಯುತ್ತಾನೆ/ಳೆ". ಕೃಷ್ಣನ್ ಅವರ ಪ್ರಕಾರ, ಪಠ್ಯಕ್ರಮ ಅಥವಾ ಬೋಧಕರು ಪ್ರಾಕೃತಿಕ ಜಗತ್ತನ್ನು ಅರ್ಥಮಾಡಿಕೊಳ್ಳುವ ಒಂದು ವಿಧಾನ ಅಥವಾ ತತ್ತ್ವಕ್ಕೆ ಅಂಟಿಕೊಂಡರೆ ಇದೇ ತಪ್ಪು ಮರುಕಳಿಸಬಹುದು. ಈ ಎರಡೂ ಸಂದರ್ಭಗಳಲ್ಲಿಯೂ ಫಲಿತಾಂಶ ಒಂದೇ ಆಗಿರುತ್ತದೆ– ತಪ್ಪಾದ ಆತ್ಮವಿಶ್ವಾಸದ ಭಾವನೆ. ಇದರ ಬದಲಾಗಿ ಕೃಷ್ಣನ್ ಹೇಳುವುದೇನೆಂದರೆ, ಮಕ್ಕಳನ್ನು ಮತ್ತು ಯುವ ವಿದ್ಯಾರ್ಥಿಗಳನ್ನು ಮುಕ್ತ ಜಾಗಕ್ಕೆ ಕರೆದೊಯ್ಯುವುದು. ಅವರ ಪ್ರಕಾರ, ಸೂಚನೆಗಳು ಸಸ್ಯ ಹಾಗೂ ಪ್ರಾಣಿಗಳೆರಡರಲ್ಲೂ ಪ್ರಭೇದಗಳ ನಡುವಿನ ಮತ್ತು ಒಳಗಿನ ಸಂಬಂಧಗಳನ್ನು ಬಹಿರಂಗಗೊಳಿಸಬೇಕು. ಮಕ್ಕಳಿಗಾಗಿ ಪುಸ್ತಕಗಳನ್ನು ಆಯ್ಕೆ ಮಾಡುವಾಗ ಇಲ್ಲವೇ ವಿನ್ಯಾಸಗೊಳಿಸುವಾಗ, "ನೀತಿಯಿಂದ ಮುಕ್ತವಾಗಿದ್ದರೆ ಮತ್ತು ಬಣ್ಣದ *ಚಿತ್ರಗಳೊಂದಿಗೆ* ವಿವರಗಳಿದ್ದರೆ ಯಾವುದೇ ಪಠ್ಯದಲ್ಲಿ ಮುಳುಗಲು ಮಕ್ಕಳು ಸದಾ ಸಿದ್ಧರಿರುತ್ತಾರೆ" ಎನ್ನುವುದು ಕೃಷ್ಣನ್ ಅವರ ಅಭಿಪ್ರಾಯ. ಶಾಲೆಯಲ್ಲಿ ಪುಟ್ಟದಾದ 'ಮಾರುಕಟ್ಟೆ ಉದ್ಯಾನ', 'ಕೋಳಿ ಮನೆ', 'ಮೇಕೆ–ಮನೆ'; 'ಪಾರಿವಾಳದ ಮನೆ'; ಮತ್ತು 'ಒಂದು ಮಧ್ಯಮ ಗಾತ್ರದ ಶಾಲಾ ನಾಯಿ' ಇರಬೇಕು ಎನ್ನುತ್ತಾರೆ ಕೃಷ್ಣನ್. ನಿಯತವಾದ ಕ್ಷೇತ್ರ ಭೇಟಿಯನ್ನೂ ಅವರು ಸಲಹೆ ಮಾಡುತ್ತಾರೆ. ಇಲ್ಲಿ ಅತಿಯಾದ ಶಿಸ್ತು ಪಾಲನೆ ಇರಬಾರದು. ಜೊತೆಗೆ, ಹೊಸ ಕಲಿಕೆಗೆ ಸಿದ್ಧರಿರುವ ಬೋಧಕರು ಅವರ ಜೊತೆಗಿದ್ದರೆ ಒಳ್ಳೆಯದು ಎನ್ನುವುದು ಅವರ ಅನಿಸಿಕೆ. ಅದೇ ಪ್ರಬಂಧದಲ್ಲಿ ಕೃಷ್ಣನ್ ಹೇಳುವಂತೆ, "ಏನಿದ್ದರೂ, ಹೊರಡುವುದಕ್ಕೆ ಮುನ್ನವೇ ಹೊರಗೆ ಏನು ಕಾಣಬಹುದು ಎನ್ನುವುದು ಯಾರಿಗೂ ತಿಳಿದಿರುವುದಿಲ್ಲ ಮತ್ತು ಈ ಅಧ್ಯಯನದ ಮೌಲ್ಯವಿರುವುದೇ ಈ ರೀತಿಯ ಸಿದ್ಧ ಯೋಜನೆಗೆ ಅನುಸಾರವಾಗಿ ಇಲ್ಲದಿರುವುದರಲ್ಲಿ." ಇಂತಹ ತಾಳ್ಮೆಯುಳ್ಳ ತೆರೆದ ಮನಸ್ಸಿನ ನಡೆಯೇ ಕೃಷ್ಣನ್ ಅವರು ಅರಿವಿನ ಕಾರಣ ಪ್ರಕೃತಿಯು ಹೀಗೇ ಎಂದು ಬೊಟ್ಟು ಮಾಡುವಂತಹ ಪ್ರಯತ್ನಗಳನ್ನು ದೂರವಿರಿಸಲು ತಮ್ಮ ಜೀವನದುದ್ದಕ್ಕೂ ಅವಲಂಬಿಸಿದ ಮೂಲಭೂತ ಮೌಲ್ಯವಾಗಿತ್ತು. ಈ ಉದ್ದೇಶಕ್ಕಾಗಿ ಅವರು ತಮಗೂ, ತಮ್ಮ ವಿದ್ಯಾರ್ಥಿಗಳಿಗೂ, ನೆನಪಿಸುತ್ತಿದ್ದರು, ಮನುಷ್ಯ ಎಂದಿಗೂ ಪ್ರಕೃತಿಯನ್ನು ಆಳಲಾರ. ನಾವು ಎಷ್ಟು ಕಷ್ಟಪಟ್ಟು ಪ್ರಯತ್ನಿಸಿದರೂ ನಾವದನ್ನು ನಮ್ಮ ಅರಿವಿನ ಪರಿಧಿಯೊಳಕ್ಕೆ ಹಿಡಿದಿಡಲು ಸಾಧ್ಯವಿಲ್ಲ. ಅವರ ಈ ಭಾವನೆ ಕೃಷ್ಣನ್ ಅವರ ಈ ಮಾತುಗಳಲ್ಲಿ ಪ್ರತಿಫಲಿಸುತ್ತದೆ, "*ಪ್ರಕೃತಿ ಸರಳವಲ್ಲ, ತಾರ್ಕಿಕವಾದುದಲ್ಲ ಮತ್ತು ಕಾರಣವಿರುವುದಲ್ಲ– ಸಧ್ಯ, ಹಾಗಿಲ್ಲದಿರುವುದು ದೇವರ ದಯೆ*". ಈ ಲೇಖನದ ಮೂಲಕ ಕೃಷ್ಣನ್ ಅವರು ಪ್ರಕೃತಿಯನ್ನು ಕೇವಲ ಅಧ್ಯಯನದ ವಸ್ತುವಾಗಿಸದೆ ಅಂತ್ಯವಿಲ್ಲದ ಹಗಲುಗನಸಿನ, ಮತ್ತು ಆಕರ್ಷಣೆಯ ವಿಷಯವನ್ನಾಗಿಸಿದ್ದಾರೆ.

(**ಚಿತ್ರ 1** ನೋಡಿ). ಅವರ ತಂದೆ ಎ ಮಾಧವಯ್ಯ, ಓರ್ವ ತಮಿಳು ಬರೆಹಗಾರರೂ, ಸುಧಾರಕರೂ ಆಗಿದ್ದರು. ಅವರ ಎಂಟು ಮಕ್ಕಳಲ್ಲಿ ಕೃಷ್ಣನ್ ಕೊನೆಯವರು. ತಮ್ಮ ಸಹೋದರರಂತೆಯೇ, ಅವರೂ ಸಾಹಿತ್ಯ ಹಾಗೂ ಕಲೆಗೆ ಆಳವಾದ ಗೌರವದೊಂದಿಗೆ ಬೆಳೆದರು. 1920ರ ದಶಕದಲ್ಲಿ ಅವರ ಕುಟುಂಬವು ಮದ್ರಾಸಿನ ದಟ್ಟಣೆಯುಳ್ಳ ಪ್ರದೇಶದಿಂದ ಮೈಲಾಪುರದಲ್ಲಿ ಅವರ ತಂದೆ ಕಟ್ಟಿಸಿದ ಮನೆಗೆ ತೆರಳಿತು. ಇದೊಂದು ನಿರ್ಣಾಯಕ ನಡೆಯಾಗಿತ್ತು. ಇಂದಿನ ಕಾಂಕ್ರೀಟ್ ಕಾಡಾಗಿರುವ ಮೈಲಾಪುರದಂತಲ್ಲದೆ ಅಂದು ಅದು ಹೊಲಗದ್ದೆಗಳು, ತೆಂಗಿನ ತೋಟಗಳು, ಮತ್ತು ಹುಲ್ಲುಗಾವಲುಗಳಿಂದ ಕೂಡಿದ ಊರಾಗಿತ್ತು. ಊರು ಅಲೆಯುವಾಗ ಪುನುಗು ಬೆಕ್ಕುಗಳು (ಪಾಮ್ ಸಿವೆಟ್), ಹಾವುಗಳು, ಆಮೆಗಳು, ಹಲವಾರು ವಿಧದ ಪಕ್ಷಿಗಳು ಮತ್ತು ಅಲ್ಲೊಂದು ಇಲ್ಲೊಂದು ಕೃಷ್ಣಮೃಗಗಳು (ಬ್ಲ್ಯಾಕ್ ಬಕ್) ಕೃಷ್ಣನ್ ಕಣ್ಣಿಗೆ ಬಿದ್ದವು.



**ಚಿತ್ರ. 1. ಎಂ ಕೃಷ್ಣನ್.** ಕೃಪೆ: ಆಶಾ ಹರಿಕೃಷ್ಣನ್. URL: https://www.mkrishnan.com/. **ಪರವಾನಗಿ:** ಹಕ್ಕುಗಳ ಮಾಲೀಕರ ಅನುಮತಿಯೊಂದಿಗೆ ಬಳಸಲಾಗಿದೆ.

ಅವರ ಆರಂಭಿಕ ಶಿಕ್ಷಣವು ಹಿಂದೂ ಪ್ರೌಢ ಶಾಲೆಯಲ್ಲಿ ನಡೆಯಿತು. ಅವರ ಶೈಕ್ಷಣಿಕ ನಿರ್ವಹಣೆ ಅಸಾಮಾನ್ಯವಾಗಿರಲಿಲ್ಲವಾದರೂ, ಅವರು ಬಹಳ ವಿಸ್ತೃತವಾಗಿ ಓದುತ್ತಿದ್ದರು. ಈ ಅವಧಿಯಲ್ಲಿ ಕಲೆ ಮತ್ತು ಸಾಹಿತ್ಯದ ಮೇಲಿನ ಅವರ ಆಸಕ್ತಿ ಇನ್ನಷ್ಟು ಆಳವಾಯಿತು. ಕೃಷ್ಣನ್ ಅವರು 1927ರಲ್ಲಿ ಇಂಟರ್ ಮೀಡಿಯೇಟ್ ಪರೀಕ್ಷೆ ಬರೆಯಲು ಮದರಾಸಿನ ಪ್ರೆಸಿಡೆನ್ಸಿ ಕಾಲೇಜಿನಲ್ಲಿ ಸೇರಿಕೊಂಡರು. ಸ್ವಲ್ಪವೇ ಕಾಲದಲ್ಲಿ ಅವರು ಕಲಾ ಸ್ನಾತಕ ಪದವಿ ಕಾರ್ಯಕ್ರಮವನ್ನು ಸೇರಿಕೊಂಡರು. ಈ ಅವಧಿಯಲ್ಲಿ, ಅವರಿಗೆ ದಕ್ಷಿಣ ಭಾರತದ ಬೆಟ್ಟಗುಡ್ಡಗಳ ಸಸ್ಯಸಮೃದ್ಧಿಯನ್ನು ಕಲೆ ಹಾಕುವುದರಲ್ಲಿ ತೊಡಗಿದ್ದ, ಪ್ರತಿಭಾವಂತ ಕ್ಷೇತ್ರ ಸಸ್ಯವಿಜ್ಞಾನಿಯಾದ ಪ್ರೊಫೆಸರ್ ಪಿ ಎಫ್ ಫೈಸನ್ (P F Fyson) ಅವರ ಪರಿಚಯವಾಯಿತು. ಇವರಿಂದಾಗಿ ಕೃಷ್ಣನ್ ಅವರಿಗೆ ಸಸ್ಯ ಹಾಗೂ ಪ್ರಾಣಿ ವರ್ಗಗಳ ನಡುವಿನ ವಿವಿಧ ಆಯಾಮಗಳ ಸಂಬಂಧಗಳ ಕುರಿತು, ಪರಸ್ಪರ ಅನ್ಯೋನ್ಯತೆಯ ಕುರಿತು ಆಸಕ್ತಿ ಬೆಳೆಯಿತು. ಕೃಷ್ಣನ್ ಅವರ ಆರಂಭದ ಅವಲೋಕನೆಗಳಲ್ಲಿ ಒಂದೆಂದರೆ, ತಮ್ಮದೇ ಉದ್ಯಾನದಲ್ಲಿ ಅವರು ಕಂಡಂತೆ, ಕೋಗಿಲೆಗೆ ಹಳದಿ ಕಣಗಿಲೆಯ (ಎಲ್ಲೋ

## ಬಾಕ್ಸ್ 2. ಕೃಷ್ಣನ್ ಅವರ ಪ್ರಕೃತಿ ಬರಹಗಳ ಕೇಂದ್ರಬಿಂದು:

ಮುಖ್ಯವಾಗಿ, ಕೃಷ್ಣನ್ ಅವರು ಸಹಜ ವೈವಿಧ್ಯತೆಯಲ್ಲಿ ಪ್ರಾಣಿ ಪ್ರಭೇದಗಳ ಭೌತಿಕ ಉಪಸ್ಥಿತಿಯಲ್ಲಿ ಮಾತ್ರ ಆಸಕ್ತಿ ಹೊಂದಿರಲಿಲ್ಲ. ಅವುಗಳ ಭಾವನಾತ್ಮಕ ಸ್ಥಿತಿಯನ್ನು ನಿರ್ಣಯಿಸಲು ಅವರು ಅಷ್ಟೇ ಉತ್ಸುಕರಾಗಿದ್ದರು (**ಚಿತ್ರ 2** ನೋಡಿ). ಒಂದೆಡೆಯಲ್ಲಿ ಮಾನವನಿಂದ ಪ್ರಾಣಿಗಳಿಗೆ ಉಂಟಾಗುವ ಯಾವುದೇ ಅನಗತ್ಯ ನೋವಿನಿಂದ ಅವರು ವಿಚಲಿತರಾಗುತ್ತಿದ್ದರು. ಮತ್ತೊಂದೆಡೆ, ಅವರು ಪ್ರಾಣಿ ಸಾಮ್ರಾಜ್ಯದೊಳಗೆ ಹಾಸ್ಯ, ಭಯ ಮತ್ತು ಪ್ರೀತಿಯ ಕ್ಷಣಗಳನ್ನು ವೀಕ್ಷಿಸಲು ಮತ್ತು ದಾಖಲಿಸಲು ವಿಫಲರಾಗಲಿಲ್ಲ. ಅವರು ಎರಡನೆಯದನ್ನು 'ಭಾವನಾತ್ಮಕ ರಕ್ತಸಂಬಂಧಗಳು' ಎಂದು ಉಲ್ಲೇಖಿಸಿದ್ದಾರೆ. ಅಂತಹ ಬಂಧುತ್ವಗಳು, ಅವರ ಪ್ರಕಾರ, ಸಂಖ್ಯಾಶಾಸ್ತ್ರೀಯವಾಗಿ ಸೆರೆಹಿಡಿಯಲಾಗುವುದಿಲ್ಲ, ಬದಲಿಗೆ, ನಾವು ಅಧ್ಯಯನ ಮಾಡುತ್ತಿರುವ ಪ್ರಾಣಿಗಳೊಂದಿಗೆ ಬೆಳೆಸಿದ ಅನ್ಯೋನ್ಯತೆಯ ಮೂಲಕ ಮಾತ್ರ ಅದು ಸಾಧ್ಯ. ಹೀಗಾಗಿ, ಅರಣ್ಯ ಇಲಾಖೆಯ ಶಿಬಿರದಲ್ಲಿದ್ದ, ವ್ಯವಸ್ಥಾಪಕರು ಸಹ ಜೊತೆಗೇ ಇರಿಸುವಷ್ಟು ಜಾಣತನ ತೋರಿಸಬೇಕಾದಂತಹ ಎರಡು ಆನೆಗಳಾದ ರತಿ ಮತ್ತು ಸುಂದರಿಯ ನಡುವಿನ ಅವಿನಾಭಾವ ಸ್ನೇಹವನ್ನು ಅವರು ಬಹಳ ಸಂತೋಷದಿಂದ ಹೇಳಿದರು. ''ಯಾವುದೇ ಭಾವನಾತ್ಮಕ ಉದ್ದೇಶದಿಂದ ಅಲ್ಲ, ಇಲ್ಲವಾದಲ್ಲಿ ಕೆಲಸ ಕೆಡುತ್ತದೆ'' ಎನ್ನುತ್ತಾರೆ ಕೃಷ್ಣನ್. ಅರಣ್ಯ ಇಲಾಖೆಯ ಶಿಬಿರದಲ್ಲಿದ್ದ ಎರಡು ಆನೆಗಳು, ರತಿ ಮತ್ತು ಸುಂದರಿಯ ನಡುವಿನ ಅವಿನಾಭಾವ ಸ್ನೇಹ ಸಂಬಂಧವನ್ನು ನೋಡಿದ ವ್ಯವಸ್ಥಾಪಕರು ಅವೆರಡನ್ನೂ ಒಟ್ಟಿಗೆ ಇಡುವ ಬುದ್ಧಿವಂತಿಕೆಯನ್ನು ತೋರಿಸಿದ್ದನ್ನು ಬಹು ಆನಂದದಿಂದ ಹೇಳಿದರು, "ಯಾವುದೇ ಭಾವನಾತ್ಮಕ ಉದ್ದೇಶದಿಂದ ಅಲ್ಲ, ಅದು ಇಲ್ಲವಾದಲ್ಲಿ ಕೆಲಸ ಕೆಡುತ್ತದೆ" ಎನ್ನುತ್ತಾರೆ ಕೃಷ್ಣನ್. ಚುಕ್ಕೆ ಜಿಂಕೆ (ಚೀತಲ್)ಗಳ ನಡುವಿನ "ವಾರೆ ನೋಟ"ವು ಅಂತರ್‌ನಿರ್ದಿಷ್ಟ ಸಂವಹನದ ಕ್ರಿಯೆಗೆ ಹೇಗೆ ಸಮನಾಗಿದೆ ಎಂಬುದನ್ನೂ ಅವರು ಗಮನಿಸಿದರು. ಪಕ್ಷಿಗಳ ಚಿಲಿಪಿಲಿಗಳು ಮತ್ತು ಹಾಡುಗಳಲ್ಲಿ ಪ್ರಕಟವಾದಂತೆ ಅವುಗಳ ಬದಲಾಗುವ ಅಭಿವ್ಯಕ್ತಿಗಳು ಮತ್ತು ಮನಸ್ಥಿತಿಗಳನ್ನು ದಾಖಲಿಸುವಾಗ, 'ಅವು ಶಕ್ತಿಯುತ ಪ್ರವೃತ್ತಿಯಿಂದ ಪ್ರೇರೇಪಿತವಾದರೂ, (ಅವು) ಹೆಚ್ಚು ಭಾವನಾತ್ಮಕ ಮತ್ತು ಸಂಕೀರ್ಣ ಜೀವಿಗಳು' ಎಂದು ಅವರು ದೃಢಪಡಿಸಿದರು. ಇಂತಹ ಪ್ರತಿಯೊಂದು ಲೇಖನವೂ ಕೃಷ್ಣನ್ ಪ್ರಾಣಿಗಳ ಲೋಕದಲ್ಲಿ ಸಹಾನುಭೂತಿಯೊಂದಿಗೆ ಹೇಗೆ ಮುಳುಗಿಹೋಗುತ್ತಾರೆ ಎನ್ನುವುದನ್ನು ವಿವರಿಸುತ್ತದೆ.



**ಚಿತ್ರ. 2. ಈಗ ವಿರಳವಾಗಿ ಕಾಣಸಿಗುವ ಪುಟಾಣಿ ಬಕ್ (ಮೌಸ್ ಡಿಯರ್) ಮರಿ.** ಕೃಷ್ಣನ್ ಹೇಳುವಂತೆ, ಸಣ್ಣ ಪ್ರಭೇದಗಳೊಂದಿಗೂ, 'ಜೀವಂತ, ಸಂವೇದನಾಶೀಲ ವಸ್ತುಗಳನ್ನು ನಿಯಮಕ್ಕೆ ತಕ್ಕುದಾಗಿ ಹೊರಹಾಕುವ ಪ್ರತಿವರ್ತನಗಳು ಮತ್ತು ಹುಟ್ಟುಗುಣವಾದ ಪ್ರತಿಕ್ರಿಯೆಗಳ ಸಮೂಹವಾಗಿ ಪರಿಗಣಿಸುವುದು ಸಂಪೂರ್ಣ ನಿರರ್ಥಕ.'

ಕೃಪೆ: ಎಂ ಕೃಷ್ಣನ್. ಎಂ ಕೃಷ್ಣನ್ (1965). 'ಲೆಟರ್ಸ್ ಫ್ರಮ್ ಎಂ ಕೃಷ್ಣನ್' ನಿಂದ ತೆಗೆದುಕೊಳ್ಳಲಾಗಿದೆ. ಚೀತಲ್: 7 (2): 10–11. ವೈಲ್ಡ್ ಲೈಫ್ ಪ್ರಿಸರ್ವೇಶನ್ ಸೊಸೈಟಿ ಆಫ್ ಇಂಡಿಯಾದಿಂದ ಪ್ರಕಟಿತ (https://wpsidoon.org/).

ಅಷ್ಟೇ ಗಮನಾರ್ಹ ಸಂಗತಿಯೆಂದರೆ, ಕೃಷ್ಣನ್ ಅಂತಹ ಅನುಭೂತಿಯನ್ನು ಅನುಭವಿಸಲು ಕಾಡು, ಮೃಗಾಲಯ ಅಥವಾ ರಾಷ್ಟ್ರೀಯ ಉದ್ಯಾನವನದವರೆಗೆ ಹೋಗಬೇಕಾಗಿ ಬರಲಿಲ್ಲ. ಮನೆಯಲ್ಲೇ ಕಾಣಸಿಗುವ ಹಲ್ಲಿಯೂ ಅದಕ್ಕೆ ಸಾಕಾಗುತ್ತಿತ್ತು. ಅಂತಹ ಒಂದು ಹಲ್ಲಿಯನ್ನು ಕಂಡಾಗ ಅವರು 'ಭಾವನಾತ್ಮಕ ಅಭಿವ್ಯಕ್ತಿಯ ಅಂಗ'ವಾಗಿ ಕಾರ್ಯನಿರ್ವಹಿಸುವ ಮೂಲಕ ಹಲ್ಲಿಯ ಬಾಲವು ಅದರ ಸಾಪೇಕ್ಷ 'ಶಬ್ದಹೀನತೆಯನ್ನು' ಹೇಗೆ ಸರಿದೂಗಿಸುತ್ತದೆ ಎಂಬುದರ ಕುರಿತು ಆಲೋಚಿಸಿದರು. ಅವರು ತಮ್ಮ ತೋಟದಲ್ಲಿ ಪಕ್ಷಿಗಳನ್ನು ಮತ್ತು ನೆಲಗಪ್ಪೆಗಳನ್ನು ಸಹ ಭಾವಪರವಶತೆಯಿಂದ ಸ್ವಾಗತಿಸುತ್ತಿದ್ದರು. ಹೆಗ್ಗಣಗಳು ಅಚ್ಚರಿಗೆ ಕಾರಣವಾಗುತ್ತಿದ್ದವು. ಇತರ ಸಮಯಗಳಲ್ಲಿ, ಮೈಲಾಪುರದಲ್ಲಿ ಮಳೆ ಬಿದ್ದಾಗ, ಪಕ್ಷಿಗಳು, ಅಳಿಲುಗಳು ಮತ್ತು ಮಂಗಗಳು ಅದನ್ನು ಹೇಗೆ ಸಹಿಸಿಕೊಳ್ಳುತ್ತವೆ ಎಂಬುದನ್ನು ನೋಡಲು ಅವರು ಹೊರಗೆ ಹೆಜ್ಜೆ ಇಡುತ್ತಿದ್ದರು. ಇವತ್ತಿಗೂ, ಕೃಷ್ಣನ್‌ರಂತೆಯೇ ಕಾಡು ಪ್ರಾಣಿಗಳು ಮತ್ತು ಅವುಗಳ ನಗರ ಸಹವರ್ತಿಗಳ ಬಗ್ಗೆ ಉತ್ಸಾಹದಿಂದ ಬರೆಯುವ ಪರಿಸರವಾದಿಯನ್ನು ಕಂಡುಹಿಡಿಯುವುದು ಕಷ್ಟ.

ಹಿನ್ನೋಟದಲ್ಲಿ, ಕೃಷ್ಣನ್ ಅವರ ಬರಹಗಳಲ್ಲಿ ಆಂಥ್ರೊಪೊಮಾರ್ಫಿಸಂ (ಅಥವಾ ಮಾನವ ಗುಣಗಳನ್ನು ಮಾನವೀಯವಲ್ಲದ ಪ್ರಾಣಿಗಳಿಗೆ ಆರೋಪಿಸುವ ಪ್ರವೃತ್ತಿ) ಅಪಾಯವನ್ನು ನಾವು ಕಾಣಬಹುದು. ಅದೇನೇ ಇದ್ದರೂ, ಈ ಬರಹಗಳ ಮೂಲಕ ಕೃಷ್ಣನ್ ಅವರು ಮಾನವರು ಮತ್ತು ಪ್ರಾಣಿಗಳ–ಎಲ್ಲಾ ರೀತಿಯ ದೊಡ್ಡ ಮತ್ತು ಸಣ್ಣ, ಹತ್ತಿರ ಮತ್ತು ದೂರದ, ವರ್ಚಸ್ವಿ ಮತ್ತು 'ಪರ್ಯೆಯಾ'– ನಡುವಿನ ಪ್ರಭೇದಗಳೊಳಗಿನ ಒಡನಾಟಕ್ಕಾಗಿ ನೈತಿಕವಲ್ಲದಿದ್ದರೂ ಉನ್ನತ ಗುಣಮಟ್ಟವನ್ನು ಸ್ಥಾಪಿಸಿದರು.

ಒಲಿಯಾಂಡರ್) ಅತ್ಯಂತ ವಿಷಪೂರಿತ ಹಣ್ಣುಗಳ ಮೇಲಿರುವ ಆಕರ್ಷಣೆ. ಉಳಿದ ಹಲವು ಹಕ್ಕಿಗಳು ಮತ್ತು ಅಳಿಲುಗಳು ಈ ಹಣ್ಣುಗಳ ಸೇವನೆಯನ್ನು ದೂರವಿಟ್ಟರೆ, ಕೋಗಿಲೆಯು "*ಈ ಹಣ್ಣಿನೆಡೆಗೆ ಸರಿದು ತನ್ನ ಕೊಕ್ಕಿನಿಂದ ಅದನ್ನು ಚುಚ್ಚಿ, ಅದರೊಳಗಿನ ಮಾಂಸಲ ಭಾಗ (ಮೀಸೋಕಾರ್ಪ್)*ವನ್ನು *ಬಗೆದು ತನ್ನ ತಲೆಯನ್ನು ಹಿಂದಕ್ಕೆ ಚಿಮ್ಮಿ ನುಂಗುವ ರೀತಿ*"ಯನ್ನು ಮೊದಲ ಬಾರಿಗೆ ದಾಖಲಿಸಿದವರಲ್ಲಿ ಕಷ್ಣನ್ ಅವರೂ ಒಬ್ಬರು.

ಕೃಷ್ಣನ್ ಅವರ ಶೈಕ್ಷಣಿಕ ಸಾಧನೆ ಗಮನಾರ್ಹವಾಗಿರಲಿಲ್ಲ. ಅಲ್ಲದೆ ಅವರು ಕಲಾ ಸ್ನಾತಕ ಪದವಿ ಮತ್ತು ಸ್ನಾತಕೋತ್ತರ ಪದವಿಗಳಲ್ಲಿ ಮೂರನೆಯ ದರ್ಜೆಯಲ್ಲಿ ಉತ್ತೀರ್ಣವಾಗಿದ್ದುದರಿಂದ ಅವರ ವೃತ್ತಿ

**ಬಾಕ್ಸ್ 3. ಕೃಷ್ಣನ್ ಅವರ ಪ್ರಶ್ನೆಗಳು:**

ಕೃಷ್ಣನ್ ಅವರು ತಮ್ಮ ಓದುಗರಿಗೆ ಕೇಳುವ ಪ್ರಶ್ನೆಗಳ ಇತರ ಕೆಲವು ಉದಾಹರಣೆಗಳು ಇಲ್ಲಿವೆ:

- ಪಕ್ಷಿಗಳನ್ನು ಹಾಡಲು ಪ್ರೇರೇಪಿಸುವ, ಪ್ರೀತಿ ಮತ್ತು ಸೀಮೆಯನ್ನು ಮೀರಿದ ಅಂಶಗಳಿವೆಯೇ?
- ಮಂಗಗಳು ಪ್ರೀತಿಯಿಂದ ಅಪ್ಪಿಕೊಳ್ಳುತ್ತವೆಯೇ?
- ಮಳೆಯ ಆಗಮನವನ್ನು ವಾಸನೆಯ ಮೂಲಕ ಗ್ರಹಿಸುವ ಕಾಡುಕೋಣ(ಗೌರ್)ಕ್ಕೆ ಪ್ರಬಲವಾದ ನೆಲದ ಪರಿಮಳ ಇದೆಯೇ?
- ಆನೆಯು ತನ್ನ ಅಯೋಡಿನ್ ಪೂರೈಕೆಯನ್ನು ಪಡೆಯಲು ಕೆಲವೊಮ್ಮೆ ನೀರಿನ ಹಯಸಿಂತ್‌ಗಳನ್ನು ತಿನ್ನುತ್ತದೆಯೇ?

ಈ ಪಟ್ಟಿಗೆ ನೀವು ಸೇರಿಸಬಹುದಾದ ಈ ರೀತಿಯ ಕೆಲವು ಪ್ರಶ್ನೆಗಳನ್ನು ನೀವು ಹೊಂದಿದ್ದೀರಾ?

ಭವಿಷ್ಯ ಅಷ್ಟೇನೂ ಆಶಾದಾಯಕವಾಗಿರಲಿಲ್ಲ. ತನ್ನ ಕುಟುಂಬದ ಒತ್ತಾಯದ ಮೇರೆಗೆ ಅವರು ಕಾನೂನು ಪದವಿಗೆ ಅರ್ಜಿ ಹಾಕಿ 1936ರಲ್ಲಿ ಕಾನೂನು ಪದವೀಧರರಾದರು. ಆದರೆ ಅವರು ನ್ಯಾಯವಾದಿಯಾಗಿ ಕೆಲಸ ಮಾಡಿರುವ ಯಾವುದೇ ದಾಖಲೆಗಳು ಸಿಗುವುದಿಲ್ಲ. ಕೆಲಕಾಲ ಒಂದು ನ್ಯಾಯಾಲಯದಲ್ಲಿ ಶಿಷ್ಯವೃತ್ತಿ ಮಾಡಿದ ನಂತರ, ಅಸೋಸಿಯೇಟೆಡ್ ಪ್ರಿಂಟರ್ಸ್ ಮತ್ತು ಮದ್ರಾಸ್ ಕಲಾ ಶಾಲೆಯಲ್ಲಿ ಅವರು ಕಲಾಕಾರರಾಗಿ ಕೆಲಸ ಮಾಡಿದರು. 1937ರಲ್ಲಿ ಕೃಷ್ಣನ್ ಅವರು ಸ್ವತಂತ್ರ ಬರಹಗಾರರಾಗಿ ಕೆಲಸ ಮಾಡಲಾರಂಭಿಸಿದರು ಹಾಗೂ ಸುದ್ದಿಪತ್ರಿಕೆಗಳಲ್ಲಿ ಪ್ರಕೃತಿಗೆ ಸಂಬಂಧಿಸಿದ ಬರೆಹಗಳನ್ನು ಪ್ರಕಟಿಸಲಾರಂಭಿಸಿದರು. 1942ರಲ್ಲಿ, ಶಿಫಾರಸಿನ ಮೇರೆಗೆ ಸಂಡೂರಿನ ಮಹಾರಾಜರಲ್ಲಿ ಉದ್ಯೋಗ ಗಿಟ್ಟಿಸಿಕೊಂಡರು. ಅವರು ಇಂದಿನ ಬಳ್ಳಾರಿಗೆ ಸೇರುವ ಸಂಡೂರಿನಲ್ಲಿ (ಕರ್ನಾಟಕ) ಎಂಟು ವರ್ಷಗಳ ಕಾಲ ಉಳಿದರು. ಈ ಅವಧಿಯಲ್ಲಿ, ಕೃಷ್ಣನ್ ಓರ್ವ ಶಾಲಾ ಶಿಕ್ಷಕರಾಗಿ, ನ್ಯಾಯಾಧೀಶರಾಗಿ, ಪ್ರಚಾರ ಅಧಿಕಾರಿಯಾಗಿ ಮತ್ತು ಮಹಾರಾಜರ ರಾಜಕೀಯ ಕಾರ್ಯದರ್ಶಿಯಾಗಿ ಕೆಲಸ ಮಾಡಿದರು. ಇವೆಲ್ಲ ಕೆಲಸಗಳು ಅವರಿಗೆ ನೀರಸವಾಗಿದ್ದವು. ಆದರೆ ಇಲ್ಲಿನ ಒಳನಾಡುಗಳು ಅವರಲ್ಲಿ ಮತ್ತೆ ಅಲೆದಾಟವನ್ನು ಪ್ರಚೋದಿಸಿದವು ಹಾಗೂ ಸಂಡೂರಿನ ಅವಧಿ ಹಲವಾರು ಅಮೂಲ್ಯ ಲೇಖನಗಳನ್ನು ಬರೆಯುವಂತೆ ಮಾಡಿತು. ಇಂತಹ ಒಂದು ಲೇಖನದಲ್ಲಿ, ಬಳ್ಳಾರಿಯ ಒಳನಾಡು ಸೆಪ್ಟೆಂಬರ್ ಮತ್ತು ಅಕ್ಟೋಬರ್ ತಿಂಗಳಲ್ಲಿ ಗುಲಾಬಿ ಸ್ಟಾರ್ಲಿಂಗ್/ಮೈನಾ ಹಕ್ಕಿ (*ಪಾಸ್ಟರ್ ರೋಸಿಯಸ್*)ಗಳನ್ನು ಹೇಗೆ ಆಕರ್ಷಿಸುತ್ತದೆ ಎನ್ನುವುದನ್ನು ಬೆರಗುದುಂಬಿ ಬರೆದರು. ಈ ಹಕ್ಕಿಗಳು ತೆನೆತುಂಬಿದ ಹೊಲಗಳಿಗೆ ಮತ್ತು ಹಣ್ಣುಗಳ ಬೆಳೆಯಿರುವಲ್ಲಿಗೆ ಮುತ್ತಬಹುದೆನ್ನುವ ನಿರೀಕ್ಷೆ ಹುಸಿಯಾಗುವಂತೆ ಅವುಗಳಿಲ್ಲದ ಸ್ಥಾನಗಳಿಗೆ ಅಲ್ಲಲ್ಲಿ ದಾಳಿಯಿಡುತ್ತಿದ್ದವು. ಈ ಅಸಾಮಾನ್ಯ ವರ್ತನೆಯ ಕಾರಣವೇನಿರಬಹುದು? ಕೃಷ್ಣನ್ ಈ ಪ್ರಶ್ನೆಯೊಂದಿಗೆ ತಮ್ಮ ಲೇಖನವನ್ನು ಮುಕ್ತಾಯಗೊಳಿಸಿದ್ದರು.



**ಚಿತ್ರ. 3. 'ವಿದ್ಯುತ್ ಬಂತು ಆನೆಗಳ ನಾಡಿಗೆ'** ಶೀರ್ಷಿಕೆಯುಳ್ಳ ಛಾಯಾಚಿತ್ರ. ವನ್ಯಜೀವಿ ಸಂರಕ್ಷಣೆಗೆ ಕೃಷ್ಣ ಅವರಲ್ಲಿ ಒಂದು ಸರಳ ಸೂತ್ರವಿತ್ತು, 'ನಮ್ಮನ್ನು ನಮ್ಮಷ್ಟಕ್ಕೇ ಬಿಟ್ಟುಬಿಡಿ'.

ಕೃಪೆ: ಎಂ ಕೃಷ್ಣನ್. ಎಂ ಕೃಷ್ಣನ್ (1965) 'ಲೆಟರ್ಸ್ ಫ್ರಮ್ ಎಂ ಕೃಷ್ಣನ್' ನಿಂದ ತೆಗೆದುಕೊಳ್ಳಲಾಗಿದೆ. ಚೀತಲ್: 7 (2): 10–11. ವೈಲ್ಡ್ ಲೈಫ್ ಪ್ರಿಸರ್ವೇಶನ್ ಸೊಸೈಟಿ ಆಫ್ ಇಂಡಿಯಾದಿಂದ ಪ್ರಕಟಿತ. (https://wpsidoon.org/).

## ಅಸಾಮಾನ್ಯ ನಿಸರ್ಗವಾದಿ ಮತ್ತು ಬರೆಹಗಾರ

ಸ್ವತಂತ್ರ ಭಾರತದಲ್ಲಿ ಸಂಡೂರು 1949ರಲ್ಲಿ ರಾಜರ ಆಡಳಿತದಿಂದ ಮುಕ್ತವಾಯಿತು ಮತ್ತು ಕೃಷ್ಣನ್ ತನ್ನ ತಂದೆಯ ಮನೆಗೆ ಮರಳಿದರು. ಈ ಹಂತದಲ್ಲಿ ಅವರು ಸ್ವತಂತ್ರ ಬರೆಹಗಾರರಾಗಿ, ನಿಸರ್ಗವಾದಿಯಾಗಿ, ಮತ್ತು ಛಾಯಾಚಿತ್ರಗಾರರಾಗಿ ಮೂಡಿಬಂದರು. 1950ರಿಂದ ಕೃಷ್ಣನ್ ಅವರು ಕಲ್ಕತ್ತೆಯ 'ಸ್ಟೇಟ್ಸ್‌ಮನ್' ಪುಟಗಳಲ್ಲಿ 'ಕಂಟ್ರಿ ನೋಟ್‌ಬುಕ್' ಎನ್ನುವ ಒಂದು ಪಾಕ್ಷಿಕ ಅಂಕಣವನ್ನು ನಿರ್ವಹಿಸಲಾರಂಭಿಸಿದರು ಹಾಗೂ 46 ವರ್ಷಗಳ ಕಾಲ ಇದನ್ನು ಮುಂದುವರೆಸಿದರು. 'ದ ಹಿಂದೂ', 'ದ ಇಲಸ್ಟ್ರೇಟೆಡ್ ವೀಕ್ಲಿ ಆಫ್ ಇಂಡಿಯಾ', ಮತ್ತು 'ಇಂಡಿಯನ್ ಎಕ್ಸ್‌ಪ್ರೆಸ್' ಇವೇ ಮೊದಲಾದ ಸುದ್ದಿಪತ್ರಿಕೆಗಳಿಗೂ ಅವರು ಬರೆಯುವುದನ್ನು ಮುಂದುವರೆಸಿದರು. ಕೃಷ್ಣನ್ ಅವರು ಕಲೆ, ಕಾಲ್ಪನಿಕ ಕಥೆ, ಕ್ರಿಕೆಟ್, ಸಾಹಿತ್ಯಕ ಇತಿಹಾಸ ಇವೇ ಮೊದಲಾದ ವಿವಿಧ ವಿಷಯಗಳ ಮೇಲೆ ಬರೆಯುತ್ತಿದ್ದರಾದರೂ ಅವರ ಅತ್ಯಂತ ಗಮನಾರ್ಹ ಕೊಡುಗೆಯೆಂದರೆ ಪ್ರಕೃತಿ ಚರಿತ್ರೆಯ ಮೇಲಿನ ಬರೆಹಗಳು (**ಬಾಕ್ಸ್ 2** ನೋಡಿ).

ಇಷ್ಟು ಹೊತ್ತಿಗಾಗಲೇ, ಫೈಸನ್ ಅವರ ಮಾರ್ಗದರ್ಶನದಲ್ಲಿ ಈ ಸಾಮಾನ್ಯ ಕಾಲೇಜು ವಿದ್ಯಾರ್ಥಿ ಓರ್ವ ಅನುಭವಿ ನಿಸರ್ಗವಾದಿಯಾಗಿ ಹೊರಹೊಮ್ಮಿದ್ದರು. ಕೃಷ್ಣನ್ ಅವರನ್ನು ಉಳಿದವರಿಗಿಂತ ಭಿನ್ನವಾಗಿಸಿದ ಒಂದು ವಿಚಾರವೆಂದರೆ ಅವರು ಪರ್ಯಾಯ ಭಾರತದ ಭೂದೃಶ್ಯಗಳು ಹಾಗೂ ವನ್ಯಜೀವಿಗಳ ಮೇಲೆ ಹೆಚ್ಚು ಗಮನವಿರಿಸಿದರು. ಮತ್ತೊಂದು ವಿಶಿಷ್ಟ ಲಕ್ಷಣವೆಂದರೆ ಅವರು ತಮ್ಮದೇ ಆದ ಅಧ್ಯಯನ ವಿಧಾನಗಳನ್ನು ವಿಕಸನ ಮಾಡಿಕೊಂಡಿದ್ದರು. ಉದಾಹರಣೆಗೆ, ಅವರು ನೈಸರ್ಗಿಕ ಪ್ರಪಂಚವನ್ನು ವೀಕ್ಷಿಸಲು ತಯಾರಿಸಿದ ವಿಶೇಷ ಸಾಧನಗಳನ್ನು ಹೊಂದಿದ್ದರು. ಇವು ಪ್ರಾಣಿಗಳಿಂದ

ಪತ್ತೆಹಚ್ಚಲ್ಪಡುವುದನ್ನು ತಪ್ಪಿಸಲು ಅವರು ಧರಿಸುತ್ತಿದ್ದ ಟೋಪಿ ಮತ್ತು ಮುಸುಕಿನಂತಹ ವಸ್ತುಗಳನ್ನು ಒಳಗೊಂಡಿದ್ದವು. ಅವರದೇ ಮಾತಿನಲ್ಲಿ ಹೇಳುವುದಾದರೆ, "*ವರ್ಷಗಳ ಕಾಲ … ನಾನು ಹೇಳಬೇಕಾದರೆ, ಒಂದೆಡೆಯಲ್ಲಿ ನಿಶ್ಚಲವಾಗಿ ನಿಲ್ಲುವ ಮತ್ತು ನಿಧಾನ ಗತಿಯಲ್ಲಿ ಚಲಿಸುವ ಸಾಮರ್ಥ್ಯವನ್ನು ಪಡೆದುಕೊಂಡಿರುವೆ.*" ಮತ್ತೊಂದು ವಿಶಿಷ್ಟ ಅಂಶವೆಂದರೆ ಅವರ ಶೈಲಿ. ಕೃಷ್ಣನ್ ಅವರ ಬರವಣಿಗೆಯು ಅವರ ಸ್ವಂತ ಅವಲೋಕನಗಳು ಮತ್ತು ಕ್ಷೇತ್ರಕಾರ್ಯದಿಂದ ಬಂದ ವಿವರಗಳಿಂದ ಸಮೃದ್ಧವಾಗಿದೆ. ಪ್ರತಿಯೊಂದು ಲೇಖನದ ಜೊತೆಗೆ ಅವರೇ ರಚಿಸಿದ ಪೆನ್-ಮತ್ತು-ಶಾಯಿಯ ರೇಖಾಚಿತ್ರಗಳು ಅಥವಾ ಅತ್ಯುತ್ತಮ ಛಾಯಾಚಿತ್ರಗಳು ಇರುತ್ತಿದ್ದವು. ಕೃಷ್ಣನ್ ಅವರ ಒಳನೋಟಗಳಲ್ಲಿರುವ ಮಗುವಿನ ವಿಸ್ಮಯವನ್ನು ಅಥವಾ ಭಾಷೆಯ ಮೇಲಿನ ಹಿಡಿತವನ್ನು ಕಡೆಗಣಿಸುವುದು ಅಸಾಧ್ಯ. ಅದರೆ, ಅದಕ್ಕೂ ಮಿಗಿಲಾಗಿ, ಅವರ ಲೇಖನಗಳಲ್ಲಿ ಅನನ್ಯವಾಗಿರುವುದೆಂದರೆ ಅವರ ವಿಚಾರಣೆಯ ಮನೋಭಾವ. ಕೋಗಿಲೆ ಮತ್ತು ಮೈನಾ ಹಕ್ಕಿಯ ಲೇಖನವು ತೋರಿಸುವಂತೆ, ಯಾವುದೇ ಅಂತಿಮ ಉತ್ತರಗಳಿಲ್ಲದಿದ್ದರೂ ಸಹ, ಪ್ರಶ್ನೆಗಳನ್ನು ಎತ್ತಿಕೊಂಡು ರಹಸ್ಯದ ಜಾಡು ಹಿಡಿಯಲು ಒಲವು ತೋರಿದವರು ಕೃಷ್ಣನ್ (**ಬಾಕ್ಸ್ 3** ನೋಡಿ). ಅವರು ತಮ್ಮ ಬಿಡುವಿನ ವೇಳೆಯಲ್ಲಿ ಪತ್ತೇದಾರಿ ಕಾದಂಬರಿಗಳನ್ನು ಓದುವುದನ್ನು ಆನಂದಿಸುತ್ತಿದ್ದುದೂ ಇದಕ್ಕೆ ಕಾರಣವಿರಬಹುದು ಮತ್ತು ಬಗೆಹರಿಯದ ರಹಸ್ಯಗಳು ಅವರನ್ನು ಬಾಧಿಸುವಂತೆ ಕಾಣುತ್ತಿರಲಿಲ್ಲ. ಕುತೂಹಲಕಾರಿ ವಿಚಾರವೆಂದರೆ, ಈ ಪ್ರಶ್ನೆಗಳನ್ನು ಕೇಳುವಲ್ಲಿ ಕೃಷ್ಣನ್ ಅವರ ಮೇಲೆ ತಾವೇ ಉತ್ತರ ಒದಗಿಸಬೇಕೆಂಬ ಒತ್ತಾಯ ಇದ್ದಂತಿಲ್ಲ. ಬದಲಿಗೆ, ಓದುಗರನ್ನು ಕೌತುಕಮಯ ಸಂಗತಿಗಳೆಡೆಗೆ ಕರೆದೊಯ್ಯುವುದು ಅವರ ತಂತ್ರದ ಒಂದು ಭಾಗವಾಗಿರುವಂತಿತ್ತು ಹಾಗೂ ಅವರನ್ನು ಇಷ್ಟು ಹೊತ್ತಿಗಾಗಲೇ ಬೆಳೆಯುತ್ತಿರುವ ಅವರ ಕುತೂಹಲದ ಪಾಡಿಗೆ ಅವರನ್ನು ಬಿಟ್ಟುಬಿಡುವಂತಿತ್ತು.

## ಧೈರ್ಯಶಾಲಿ ಸಂರಕ್ಷಕ

1959ರಲ್ಲಿ, ವಿದ್ಯಾರ್ಥಿವೇತನದ ದೆಸೆಯಿಂದಾಗಿ, ಭಾರತದ ಉದ್ದಗಲಕ್ಕೆ ಪ್ರವಾಸ ಮಾಡುವ ಅವಕಾಶ ಕೃಷ್ಣನ್ ಅವರಿಗೆ ದೊರಕಿತು. ಈ ಅವಧಿಯು ರಾಷ್ಟ್ರ ಕಟ್ಟುವ ಅಭಿವೃದ್ಧಿ ಕಾಮಗಾರಿಗಳ ಸಮಯದಲ್ಲೇ ಆಗಿತ್ತು. ಆ ಸಮಯದಲ್ಲಿ ದೊಡ್ಡ ಅಣೆಕಟ್ಟುಗಳ ನಿರ್ಮಾಣ, ಗಣಿಗಾರಿಕೆಯ ಯೋಜನೆಗಳು, ರೈಲು ಹಳಿಗಳು, ರಸ್ತೆಗಳ ನಿರ್ಮಾಣ, ಕೃಷಿ ವಿಸ್ತರಣೆಯ ಭಾಗವಾಗಿ ದೊಡ್ಡ ತೋಟಗಳ ನಿರ್ಮಾಣ, ಇವೆಲ್ಲವೂ ಎಗ್ಗಿಲ್ಲದೆ ಸಾಗಿದ್ದವು. ಉಳಿದ ಕೆಲವರಂತಲ್ಲದೆ, ಕೃಷ್ಣನ್ ಇದರಿಂದ ಧನಾತ್ಮಕವಾಗಿ ಪ್ರಭಾವಿತರಾಗಲಿಲ್ಲ. ಇದು ತನ್ನ ಪ್ರದೇಶದಲ್ಲಿರುವ ವನ್ಯಜೀವಿಗಳ ಬದುಕುವ ಹಕ್ಕನ್ನು ಗೌರವಿಸಲು ವಿಫಲವಾದ ಕಾರಣ ಈ ಯೋಜನೆಗಳ ಹಿಂದಿರುವ ರಾಷ್ಟ್ರಭಕ್ತಿಯ ಆಲೋಚನೆಯನ್ನು ಅವರು ನಿರ್ಭೀತರಾಗಿ ಪ್ರಶ್ನಿಸಿದರು (**ಚಿತ್ರ 3** ನೋಡಿ).

ಅವರ ಕಾಳಜಿಯ ಪ್ರಮುಖ ವಿಷಯವೆಂದರೆ ಆನೆಗಳು. ವನ್ಯಜೀವಿಗಳು ಸಾಮಾನ್ಯವಾಗಿ ತೊಂದರೆಗೊಳಗಾಗಿದ್ದವು; ಹಕ್ಕಿಗಳು, ಹುಲಿಗಳು ಮತ್ತು ಇತರ ಸಣ್ಣ ಪ್ರಾಣಿಗಳು ಮುಂದೆ ಬರುತ್ತಿರುವ ನಾಗರಿಕತೆಯ ಜೊತೆಗೆ ಸಂಪರ್ಕ ತಪ್ಪಿಸಲು ಸಾಧ್ಯವಾದಂತೆ ಆನೆಗಳಿಗೆ ಸಾಧ್ಯವಿರಲಿಲ್ಲ. ತಮ್ಮ ವಾಸಸ್ಥಾನಗಳಿಗೆ ಹಾಗೂ ಹಾದಿಗಳಿಗೆ ಆಳವಾದ ಬಾಂಧವ್ಯ ಹೊಂದಿರುವ ದೊಡ್ಡ ಗಾತ್ರದ, ವಿಶಾಲವಾದ ವ್ಯಾಪ್ತಿಯು ಇರುವ, ಈ ದೀರ್ಘಾಯುಷಿಗಳಿಗೆ ಮಾನವರೊಂದಿಗೆ ಸಂಘರ್ಷಕ್ಕೆ ಇಳಿಯುವುದು ಅನಿವಾರ್ಯವಾಯಿತು (**ಬಾಕ್ಸ್ 4** ನೋಡಿ).

ಆನೆಯ ಕುರಿತಾದ ಕೃಷ್ಣನ್ ಅವರ ಅರಿವು ಆಳವಾದಂತೆ, ಭಾರತವು 1973ರಲ್ಲಿ ಹುಲಿ ಯೋಜನೆಯನ್ನು ಜಾರಿಗೆ ತಂದಿತು. ಇಂದಿಗೂ ಇದು ಭಾರತೀಯ ಹುಲಿಗಳ ಸಂರಕ್ಷಣೆಗಾಗಿ ಭಾರತ ಸರಕಾರದಿಂದ ಪ್ರಾಯೋಜಿತವಾಗಿರುವ ಯೋಜನೆಯಾಗಿ ಮುಂದುವರಿಯುತ್ತಿದೆ. ಈ ಯೋಜನೆಯ ನಿಯಂತ್ರಣಾ ಸಮಿತಿಯ ಸಂಸ್ಥಾಪಕ

### ಬಾಕ್ಸ್ 4. ಆನೆಗಳ ರಕ್ಷಣೆಯಲ್ಲಿ:

ದುರದೃಷ್ಟವಶಾತ್, ಕೃಷ್ಣನ್ ಅವರ ಅನೇಕ ಸಮಕಾಲೀನರು ತಮ್ಮ ಕಾಲದ ಚೈತನ್ಯಕ್ಕಿಂತ ಮೇಲಿರಲಿಲ್ಲ. ಆನೆಗಳು ಕಾಡುಗಳಿಗೆ ವಿನಾಶಕಾರಿ ಎಂದು ನಿಸರ್ಗವಾದಿಗಳು, ಅರಣ್ಯಾಧಿಕಾರಿಗಳು ಮತ್ತು ಆಡಳಿತಗಾರರ ನಿಕಟ ಗುಂಪು ವಿವಾದಾತ್ಮಕವಾಗಿ ವಾದಿಸಿತು. ಅವುಗಳ ಸಂಖ್ಯೆ ವೇಗವಾಗಿ ವೃದ್ಧಿಯಾಗುವುದು, ಪ್ರದೇಶಗಳನ್ನು ತುಂಬಿಬಿಡುವುದು ಮತ್ತು ತಮ್ಮ ವಲಸೆ ಮಾರ್ಗಗಳಲ್ಲಿ ಕಂಡುಬರುವ ಮರಗಳು ಮತ್ತು ಸಸಿಗಳನ್ನು ಕಿತ್ತುಹಾಕುವುದು ಆನೆಗಳ ಲಕ್ಷಣವಾಗಿದೆ ಎಂದು ಅವರು ಹೇಳಿದರು. ಕೃಷ್ಣನ್ ಅವರು ಅಂತಹ ವಿಚಾರಗಳ ಅಸಂಬದ್ಧತೆಯನ್ನು ಸೂಕ್ಷ್ಮವಾಗಿ ತೆರೆದಿಟ್ಟರು. ಕೆಲವರು ಅಭಿವೃದ್ಧಿಗೆ ದಾರಿ ಮಾಡಲು ಆನೆಗಳ ಆಯಕಟ್ಟಿನ ಹತ್ಯೆಯನ್ನು ಮನ್ನಿಸಿದರು. ಇಂತಹ ಕ್ರಮಗಳು ಪರಿಸ್ಥಿತಿಯನ್ನು ಹೇಗೆ ಇನ್ನಷ್ಟು ಹದಗೆಡಿಸುತ್ತವೆ ಎಂಬುದನ್ನು ತೋರಿಸುವ ಮೂಲಕ ಕೃಷ್ಣನ್ ಇದನ್ನು ಪ್ರತಿಭಟಿಸಿದರು. ಗುಂಡೇಟಿನಿಂದ ಬದುಕುಳಿದ ಆನೆಗಳು, ತೆರೆದ, ಕೊಳೆತ ಮತ್ತು ಹುಳು ಹಿಡಿದ ಗಾಯಗಳೊಂದಿಗೆ ಮಾನವ ಸಮಾಜಕ್ಕೆ ದುಪ್ಪಟ್ಟು ಶತ್ರುಗಳಾಗಿ ಪರಿಣಮಿಸಿದವು. ಕೃಷ್ಣನ್ ಅವರ ಮನವಿಗಳು ಆಗಾಗ್ಗೆ ಕಿವುಡಾದ ಕಿವಿಗಳ ಮೇಲೆ ಬೀಳುತ್ತಿದ್ದವು.

1970ರ ದಶಕದ ಆರಂಭದಲ್ಲಿ, ಇಂಟರ್ನ್ಯಾಷನಲ್ ಯೂನಿಯನ್ ಆಫ್ ಕನ್ಸರ್ವೇಶನ್ (IUCN) ಪರವಾಗಿ ಸಲ್ಲಿಸಿದ ವರದಿಯ ಭಾಗವಾಗಿ, ವಿಜ್ಞಾನಿ ಆರ್ ಹೆಚ್ ವಾಲರ್ (RH Waller) ಆನೆಗಳ ಬಗ್ಗೆ, ವಿಶೇಷವಾಗಿ ಕೇರಳದ ವಯನಾಡು ಪ್ರದೇಶಕ್ಕೆ ಸಂಬಂಧಿಸಿದಂತೆ ಹಲವಾರು ಅವಹೇಳನಕಾರಿ ಟೀಕೆಗಳನ್ನು ಮಾಡಿದರು. IUCNನ ಪ್ರಾಮುಖ್ಯತೆಯನ್ನು ಗಮನಿಸಿಕೊಂಡು ಈ ಸಂಶೋಧನೆಗಳನ್ನು ಇತರರು ಪ್ರಶ್ನಿಸದೆ ಬಿಟ್ಟರು. ಆದರೆ ಕೃಷ್ಣನ್ ಅವುಗಳ ಮೇಲೆ ಎರಗಿದರು. 1968ರಲ್ಲಿ, ವಯನಾಡಿನ ಭಾಗಗಳನ್ನು ಒಳಗೊಂಡಂತೆ ಪರ್ಯಾಯ ಭಾರತದಲ್ಲಿನ ಸಸ್ತನಿಗಳ ವಿಶಾಲ ನೆಲೆಯ ಪರಿಸರ ಸಮೀಕ್ಷೆಯನ್ನು ಬೆಂಬಲಿಸಲು ಕೃಷ್ಣನ್ ಅವರಿಗೆ ಜವಾಹರಲಾಲ್ ನೆಹರು ಫೆಲೋಶಿಪ್ ನೀಡಲಾಯಿತು. ಈ ಅಧ್ಯಯನದ ಸಂಶೋಧನೆಗಳನ್ನು ಬಾಂಬೆ ನ್ಯಾಚುರಲ್ ಹಿಸ್ಟರಿ ಸೊಸೈಟಿ (BNHS) 1971ರಲ್ಲಿ 'ಭಾರತದ ವನ್ಯಸಂಪತ್ತು' (ಇಂಡಿಯಾಸ್ ವೈಲ್ಡ್‌ಲೈಫ್) ಎಂಬ ಅಮೂಲ್ಯ ಪುಸ್ತಕವಾಗಿ ಪ್ರಕಟಿಸಿತು. ವಿಶೇಷವಾಗಿ, ಈ ಫೆಲೋಶಿಪ್‌ಗಾಗಿ ಕೃಷ್ಣನ್ ಅವರು ನಡೆಸಿದ ಕ್ಷೇತ್ರಕಾರ್ಯವು ಆನೆಗಳಿಂದಾಗಿರುವುದು ಎನ್ನುವ ವಿನಾಶವು *"ಆಳವಾದ, ವೈವಿಧ್ಯಮಯ ಮತ್ತು ನಿರಂತರ ಮಾನವ ನುಗ್ಗುವಿಕೆಯ ಸರಳ ಮತ್ತು ಅನಿವಾರ್ಯ ಪರಿಣಾಮವಾಗಿದೆ"* ಎಂದು ತೋರಿಸಲು ಸಹಾಯ ಮಾಡಿದೆ.

## ಬಾಕ್ಸ್ 5. ಕಾಡಿನಲ್ಲಿದ್ದಂತೆ ನಾಡಿನಲ್ಲೂ:

ಆಸಕ್ತಿಕರವಾಗಿ, ಕೃಷ್ಣನ್ ಸ್ಥಾನಮಾನದಲ್ಲಿ ಬೆಳೆದಂತೆ, ಅವರ ಕಾಳಜಿಯು ಅರಣ್ಯಗಳಿಗೆ ಮಾತ್ರ ಸೀಮಿತವಾಗಿ ಉಳಿಯಲಿಲ್ಲ. ಅವರ ಕಾಳಜಿಗಳ ಶೀಘ್ರತೆಯು ನಗರ ಪರಿಸರ, ಸಾಕುಪ್ರಾಣಿಗಳು ಮತ್ತು 'ಪರೈಯಾ' ಪ್ರಭೇದಗಳನ್ನು ಒಳಗೊಂಡಿರುವ ಆಂದೋಲನದ ರೂಪವನ್ನು ಪಡೆಯಿತು. ಉದಾಹರಣೆಗೆ, ಅವರು ಟ್ರಾಕ್ಟರ್‌ಗಳ ಬಳಕೆಯಿಂದಾಗಿ ಅಮೃತ್ ಮಹಲ್ ಹೋರಿಗಳಂತಹ ಸ್ಥಳೀಯ ತಳಿಗಳ ಜಾನುವಾರುಗಳು ಕಣ್ಮರೆಯಾಗುತ್ತಿರುವುದರ ಬಗ್ಗೆ ಚಿಂತಿತರಾದರು. ತನ್ನದೇ ತವರೂರಾದ ನಗರದಲ್ಲಿ ಪ್ರಾಣಿಗಳ ಮೇಲೆ ನಡೆಯುತ್ತಿದ್ದ ಕ್ರೌರ್ಯದಿಂದ ಅವರು ಬಳಲಿಹೋದರು. ಹೊರೆ ಹೊರುವ ಜೀವಿಗಳಾದ ಕತ್ತೆಗಳು ಹೇಗೆ ಕ್ರೂರವಾಗಿ ಅತಿಯಾಗಿ ಕೆಲಸ ಮಾಡಿಸಲ್ಪಡುತ್ತವೆ ಮತ್ತು ಕಡಿಮೆ ಅರೈಕೆಗೊಳಗಾಗುತ್ತವೆ ಎಂಬುದನ್ನು ನೋಡುವುದು ಅವರಿಗೆ ನೋವಿನ ವಿಷಯವಾಗಿತ್ತು. ಅಂತೆಯೇ, 'ಹೊನ್ನಕ್ಕಿ (ಓರಿಯೊಲ್ಸ್) ಮತ್ತು ನೊಣಹಿಡುಕ (ಫ್ಲೈ ಕ್ಯಾಚರ್) ಗಳಂತಹ ಆಕರ್ಷಕ ಮತ್ತು ಸಾಧುಸ್ವಭಾವದ ಪಕ್ಷಿಗಳನ್ನು ಪ್ರೋತ್ಸಾಹಿಸಲು' ಪುರಸಭೆಯ ಪ್ರದೇಶಗಳಲ್ಲಿ ಕಾಗೆಗಳನ್ನು ನಿರ್ಮೂಲನೆ ಮಾಡುವ ರಾಷ್ಟ್ರೀಯ ಪಕ್ಷಿ ಸಂರಕ್ಷಣೆ ಸಮಿತಿಯ ಪ್ರಸ್ತಾಪವನ್ನು ಅವರು ತಿರಸ್ಕರಿಸಿದರು. ಇದರ ಬದಲಿಗೆ ನಗರಗಳಲ್ಲಿ ಹಸಿರು ಹೊದಿಕೆ ಬೆಳೆಯುವುದು ಸೂಕ್ತ ಎನ್ನುವುದು ಅವರ ಸಲಹೆಯಾಗಿತ್ತು. ಕಾಗೆಗಳ ಸಾಮೂಹಿಕ ಹತ್ಯೆ ಅಗತ್ಯವಿರಲಿಲ್ಲ. ಅಂತೆಯೇ, ಅವರು ಭಾರತೀಯ 'ಪರೈಯಾ' ನಾಯಿಯನ್ನು ಬೀದಿಗಳಲ್ಲಿ ತೊಡೆದುಹಾಕಲು ಬಯಸಿದವರಿಂದ ಅವುಗಳನ್ನು ಸಮರ್ಥಿಸಿಕೊಂಡರು. ಅವರ ಪ್ರಕಾರ, "ಇವುಗಳಿಗಿಂತ ಹೆಚ್ಚು ಉತ್ತಮವಾದ ಮನೆ-ನಾಯಿ ಬೇರೆ ಇಲ್ಲ. ಅವು ಬಹಳ ಬುದ್ಧಿವಂತವೂ ಮತ್ತು ಸದಾ ಸಿದ್ಧವೂ ಇರುತ್ತವೆ. ನೀವವುಗಳಿಗೆ ಏನನ್ನು ಬೇಕಾದರೂ ಕಲಿಸಬಹುದು.''

ಸದಸ್ಯರಾಗಿದ್ದ ಕೃಷ್ಣನ್ ಅವರು ಹುಲಿಗಾಗಿ ಮತ್ತು ಅದರ ಬೇಟೆಯ ಪ್ರಾಣಿಗಳಿಗಾಗಿ ಭೂಮಿಯನ್ನು ಮೀಸಲಿಡುವುದು ಆನೆಗಳಿಗೆ ಒಂದು ಮಟ್ಟದ ತಾತ್ಕಾಲಿಕ ಶಮನ ನೀಡುವುದೆನ್ನುವುದನ್ನು ಅಲ್ಲಗಳೆಯಲಿಲ್ಲ. ಆದರೂ, ಅವರಿಗೆ ಇನ್ನೊಂದು ತುದಿಯಲ್ಲಿ ಚಿಂತೆ ಕಾಡುತ್ತಲೇ ಇತ್ತು. *"ಭಾರತದಲ್ಲಿ ಕಳೆದ ಸುಮಾರು 200 ವರ್ಷಗಳಲ್ಲಿ ಹುಲಿಗಳು ಕಣ್ಮರೆಯಾಗುತ್ತಿರುವ ವಿಷಯ ಕೊನೆಯ ಹಂತದಲ್ಲಿ ಅರಿವಿಗೆ ಬಂದಿದೆಯೆಂದಾದರೆ, ಅದರಷ್ಟು ಗಮನ ಸೆಳೆಯದ ಪ್ರಾಣಿಗಳಾದ ಸಿಂಗಳೀಕ (ಲಯನ್ ಟೇಲ್ಡ್ ಮಕಾಕ್), ಕರಡಿ (ಸ್ಲಾತ್ ಬೇರ್), ಕತ್ತೆಕಿರುಬ (ಹೈನಾ), ತೋಳ ಮತ್ತು ಪುಟ್ಟ ಭಾರತೀಯ ನರಿ ಗಮನಕ್ಕೆ ಬಾರದೇ ಹೋಗಿವೆ."* ಸಮಯ ಕಳೆದಂತೆ ಕೃಷ್ಣನ್ ಅವರು ಈ ಪಟ್ಟಿಗೆ ಹಲ್ಲಿಗಳ ಜಾತಿಗ ಸೇರಿದ ವಾಟರ್ ಮಾನಿಟರ್, ಮತ್ತು ಕಾಡು ನಾಯಿಗಳನ್ನು ಸೇರಿಸಿದರಲ್ಲದೆ ಕೃಷ್ಣಮೃಗ ಮತ್ತು ಚಿರತೆಯ ಸ್ಥಳೀಯ ನಾಶದ ಸಾಧ್ಯತೆಯ ಅಪಾಯವನ್ನೂ ಎತ್ತಿಹಿಡಿದರು. ಹಾಗೆ ಮಾಡುವ ಮೂಲಕ ಕೃಷ್ಣನ್ ಅವರು ಇಂದು ನಾವು ಹೇಳುವ 'ಮೌನ ವಿನಾಶ'ದ ಕುರಿತಾಗಿ ಭವಿಷ್ಯ ನುಡಿದಿದ್ದರೇನೋ ಅನ್ನುವಂತಿದೆ. *"ಈ ಪ್ರಕ್ರಿಯೆಯು 'ವರ್ಚಸ್ಸಿರುವ' ಪ್ರಮುಖ ಪ್ರಾಣಿಗಳಿಗೆ ನಾವು ಕೊಡುವ ಆದ್ಯತೆಯು ಆರೋಗ್ಯಕರ ಪರಿಸರ ವ್ಯವಸ್ಥೆಯಲ್ಲಿ ಅಷ್ಟೇ ಮಹತ್ವವುಳ್ಳ, ಚಿಕ್ಕ ಪುಟ್ಟ ಮತ್ತು ಕಡಿಮೆ ಆದ್ಯತೆಯ ಪ್ರಭೇದಗಳೆಡೆಗೆ ನಮ್ಮನ್ನು ಕುರುಡಾಗಿಸುವಂತಹುದು"* (**ಬಾಕ್ಸ್ 5** ನೋಡಿ).

## ಅಂತಿಮ ನುಡಿ

ವನ್ಯಜೀವಿ ಸಂರಕ್ಷಣೆಯಲ್ಲಿನ ಅವರ ಕೆಲಸವನ್ನು ಗುರುತಿಸಿ, ಕೃಷ್ಣನ್ ಅವರಿಗೆ 1970ರಲ್ಲಿ ಪದ್ಮಶ್ರೀ ಪ್ರಶಸ್ತಿಯನ್ನು ನೀಡಲಾಯಿತು. 1995ರಲ್ಲಿ, ಕೃಷ್ಣನ್ ಅವರನ್ನು ವಿಶ್ವಸಂಸ್ಥೆಯ ಪರಿಸರ ಕಾರ್ಯಕ್ರಮದ (UNEP) ಗ್ಲೋಬಲ್ 500 ಗೌರವಕ್ಕೆ ನಾಮನಿರ್ದೇಶನ ಮಾಡಲಾಯಿತು, ಅವರೇ ಹೇಳುವಂತೆ ಇದು *"ಭಾರತದ ವನ್ಯ ಸಸ್ಯ ಮತ್ತು ಪ್ರಾಣಿಗಳ ಅದ್ಭುತ ಪರಂಪರೆ ವಿನಾಶದೆಡೆಗೆ ಸಾಗುತ್ತಿರುವ ಬಗ್ಗೆ ಸಾರ್ವಜನಿಕರಲ್ಲಿ ಆಸಕ್ತಿಯನ್ನು ಉತ್ತೇಜಿಸುವ ಮತ್ತು ಅರಿವು ಮೂಡಿಸುವ ಸರಿಸುಮಾರು ಅರ್ಧ ಶತಮಾನದ ನಿರಂತರ ಪ್ರಯತ್ನಕ್ಕಾಗಿ".*

## ಬಾಕ್ಸ್ 6. ಶಾಲಾ ಗ್ರಂಥಾಲಯಗಳಿಗೆ ಕೆಲವು ಪ್ರಮುಖ ಸಂಪನ್ಮೂಲಗಳು:

ಈ ಕೆಳಗಿನ ಮೂರು ಪುಸ್ತಕಗಳು ಕೃಷ್ಣನ್ ಅವರ ಕೆಲವು ಬರಹಗಳನ್ನು ಒಳಗೊಂಡಿವೆ:

- ಶಾಂತಿ ಮತ್ತು ಆಶಿಶ್ ಚಂದೋಲಾ(2014)ರ ಪುಸ್ತಕ: 'ಆಫ್ ಬರ್ಡ್ಸ್ ಅಂಡ್ ಬರ್ಡ್ ಸಾಂಗ್.' ಇಲ್ಲಿ ಪ್ರಸಿದ್ಧ ಪಕ್ಷಿತಜ್ಞರಾದ ಜಫರ್ ಫತೇ ಅಲಿಯವರ ಮುನ್ನುಡಿಯಿದೆ. ನವದೆಹಲಿಯ ಅಲೆಫ್‌ನಿಂದ ಪ್ರಕಟಿತ;
- ರಾಮಚಂದ್ರ ಗುಹಾ (2007)ರವರ ಕೃಷ್ಣನ್‌ರವರ ಬರೆಹಗಳ ಸಂಕಲನ: 'ನೇಚರ್ಸ್ ಸ್ಪೋಕ್ಸ್ ಮನ್: ಎಂ ಕೃಷ್ಣನ್ ಎಂಡ್ ಇಂಡಿಯನ್ ವೈಲ್ಡ್ ಲೈಫ್', ನವದೆಹಲಿಯ ಪೆಂಗ್ವಿನ್ ಬುಕ್ಸ್ ಪ್ರಕಟಿತ;
- ಕೃಷ್ಣನ್ ಅವರೇ ಬರೆದಿರುವ ಎರಡು ಸಂಪುಟಗಳ ಜೋಡಿ: 'ಇಂಡಿಯಾಸ್ ವೈಲ್ಡ್ ಲೈಫ್ ಇನ್ 1959- 1970' ಬಿಎನ್‌ಎಚ್‌ಎಸ್, ಮುಂಬಯಿ ಪ್ರಕಟಿತ;

ಪ್ರಸ್ತುತ ಸಂಪಾದಕರಿಗೆ ಬರೆಯುವ ಮೂಲಕ ಬಿಎನ್‌ಎಚ್‌ಎಸ್ (ಅಥವಾ ಜೆ ಬಿಎನ್‌ಎಚ್‌ಎಸ್) ನಿಯತಕಾಲಿಕದಲ್ಲಿ ಪ್ರಕಾಶನಗೊಂಡ ಕೃಷ್ಣನ್ ಅವರ ಕೆಲವು ಲೇಖನಗಳನ್ನು ಪಡೆದುಕೊಳ್ಳಬಹುದು:

- Krishnan (1952). 'Koels eating the poisonous fruit of the Yellow Oleander.' JBNHS, 50 (4): pg. 943-945;
- Krishnan (1955). 'The Rosy Pastor in the Bellary Area.' JBNHS, 53 (1): pg.128;
- Krishnan (1974). 'RH Waller's observations on wildlife in India: a partial rejoinder.' JBNHS, 71 (3): pg. 594-598;
- Krishnan (1978). 'Disconnected observations on a species of Scolapendra.' JBNHS, 75 (1), pg. 239-240; and,
- Krishnan (1978). 'Emotive kinships amongst animals.' JBNHS, 75 (3), pg. 613-618.

1950ರ ದಶಕದ ಪೂರ್ವಭಾಗದಲ್ಲಿ 'ದ ಸ್ಟೇಟ್ಸ್‌ಮನ್'ನಲ್ಲಿ ಪ್ರಕಟವಾದ ಕೃಷ್ಣನ್ ಅವರ ಕೆಲವು ಲೇಖನಗಳನ್ನು ಇತ್ತೀಚೆಗೆ ಡಿಜಿಟೈಸ್ ಮಾಡಲಾಗಿದೆ. ಅವುಗಳನ್ನು ಇಲ್ಲಿ ಪಡೆದುಕೊಳ್ಳಬಹುದು: https://www.mkrishnan.com/uploads/1/1/2/5/112547211/1950-54_cn.pdf.

**ಬಾಕ್ಸ್ 7. ಪರ್ಯಾಲೋಚನೆಗೆ ಕೆಲವು ಪ್ರಶ್ನೆಗಳು:**

ಪ್ರ. ಕೃಷ್ಣನ್ ಅವರು ಶಾಲೆಯ ಪಠ್ಯಕ್ರಮದಲ್ಲಿ ಹಸುಗಳನ್ನು ಹೇಗೆ ಪರಿಗಣಿಸುತ್ತಾರೆ ಎಂಬುದರ ಮೂಲಕ ಕಲಿಕೆಯ ಕೇಂದ್ರೀಕೃತ ವ್ಯವಸ್ಥೆಯನ್ನು ವಿವರಿಸಲು ಆಯ್ಕೆ ಮಾಡುತ್ತಾರೆ. ಅಂತಹ ಇತರ ಉದಾಹರಣೆಗಳ ಬಗ್ಗೆ ನಿಮಗೆ ತಿಳಿದಿದೆಯೇ? ಒಂದನ್ನು ವಿವರಿಸಿ.

ಪ್ರ. ನಿಮ್ಮ ಸುತ್ತಮುತ್ತಲಿನ ಪ್ರದೇಶದಲ್ಲಿ ನಿಮಗೆ ಆಸಕ್ತಿಯಿರುವ ಪ್ರಾಣಿಯ ಬಗ್ಗೆ ಯೋಚಿಸಿ. ಅದರ ಯಾವುದೇ ವಿಶೇಷತೆಗಳನ್ನು ಸಾಧ್ಯವಾದಷ್ಟು ವಿವರವಾಗಿ ವಿವರಿಸುವ ಟಿಪ್ಪಣಿ ಬರೆಯಿರಿ.

ಪ್ರ. ಕಾಡು ಮತ್ತು ಸಾಕು ಪ್ರಾಣಿಗಳೆರಡಕ್ಕೂ ತಮ್ಮ ಸೂಕ್ಷ್ಮತೆಯನ್ನು ವಿಸ್ತರಿಸಿದ ಸಮಕಾಲೀನ ನೈಸರ್ಗಿಕವಾದಿಯ ಬಗ್ಗೆ ಯೋಚಿಸಿ. ಅವರ ಸಣ್ಣ ಜೀವನ ಚರಿತ್ರೆಯನ್ನು ರಚಿಸಿ.

ಪ್ರ. ಹುಲಿಗಳು ಮತ್ತು ಆನೆಗಳಂತೆ ಅದ್ಭುತ ಅಥವಾ ವರ್ಚಸ್ವಿಯಾಗಿ ಕಾಣದ ಐದು ಅಳಿವಿನಂಚಿನಲ್ಲಿರುವ ಪ್ರಭೇದಗಳನ್ನು ನೀವು ಪಟ್ಟಿ ಮಾಡಬಹುದೇ? ಈ ಪ್ರಭೇದಗಳಿಗೆ ಒತ್ತು ನೀಡಲು ಕೊಲಾಜ್ ಮಾಡಲು ಪ್ರಯತ್ನಿಸಿ.

ಪ್ರ. ಪ್ರಸ್ತುತ ಅಭಿವೃದ್ಧಿ ಯೋಜನೆಗಳು ಆನೆಯ ಮೇಲೆ ಹೇಗೆ ಪರಿಣಾಮ ಬೀರುತ್ತಿವೆ? ನಿಮಗೆ ಹತ್ತಿರವಿರುವ ಆನೆಗಳ ಆವಾಸಸ್ಥಾನದಲ್ಲಿ ಇದನ್ನು ತನಿಖೆ ಮಾಡಿ.

ಅವರು ಬಿಟ್ಟು ಹೋಗಿರುವ ಅಮೂಲ್ಯ ಪರಂಪರೆಯನ್ನು ಕೃಷ್ಣನ್ ಅವರ ಸ್ವಂತ ಬರೆಹಗಳು ಹಾಗೂ ಅವರ ಮೇಲೆ ಬರೆಯಲಾದ ಲೇಖನಗಳಲ್ಲಿ ಮತ್ತೆ ಕಂಡುಕೊಳ್ಳಬಹುದು (**ಬಾಕ್ಸ್ 6** ನೋಡಿ).

ಈ ಪ್ರಕೃತಿಯ ವಿದ್ಯಾರ್ಥಿಯ ಜೀವನ ಮತ್ತು ಕಾಯಕವು ನಿಸರ್ಗದ ಚರಿತ್ರೆ ಬರೆಯುವುರಲ್ಲಿ ಮತ್ತು ಸಂರಕ್ಷಣೆಯಲ್ಲಿ ದಣಿವಿಲ್ಲದ ಕುತೂಹಲ ಮತ್ತು ಪ್ರಾಕೃತಿಕ ಪ್ರಪಂಚದ ಕುರಿತಾದ ಸೂಕ್ಷ್ಮ ಸಂವೇದನೆಯು ಯಾವ ಪಾತ್ರ ವಹಿಸುತ್ತದೆ ಎಂದು ಹಲವು ಉದಾಹರಣೆಗಳೊಂದಿಗೆ ನಮಗೆ ತೋರಿಸಿಕೊಡುತ್ತದೆ (**ಬಾಕ್ಸ್ 7** ನೋಡಿ). ಕೃಷ್ಣನ್ ನಮಗೆ ನೆನಪಿಸುವಂತೆ, "*ನಾವು ಹೊಂದಿರುವ ಪ್ರಕೃತಿಯ ಪರಂಪರೆ ನಮ್ಮ ಸಂಚು, ಬುದ್ಧಿಮತ್ತೆ, ಅಥವಾ ಕಲ್ಪನೆಯಿಂದಾಗಿ ಇರುವುದಲ್ಲ. ಅದು ನಮ್ಮ ಸೃಜನಾತ್ಮಕ ಕಲ್ಪನೆಗೂ ಮೀರಿರುವಂತಹುದು ಆದರೂ ಅದನ್ನು ನಾಶ ಮಾಡುವ ಶಕ್ತಿ ನಮಗಿದೆ*".

## ಪ್ರಮುಖ ಕಲಿಕೆಗಳು



- ಎಂ ಕೃಷ್ಣನ್ ಅವರ ಜೀವನ ಮತ್ತು ಕಾಯಕವು ನಿಸರ್ಗದ ಚರಿತ್ರೆ ಬರೆಯುವುರಲ್ಲಿ ಮತ್ತು ಸಂರಕ್ಷಣೆಯಲ್ಲಿ ದಣಿವಿಲ್ಲದ ಕುತೂಹಲ ಮತ್ತು ಪ್ರಾಕೃತಿಕ ಪ್ರಪಂಚದ ಕುರಿತಾದ ಸೂಕ್ಷ್ಮ ಸಂವೇದನೆಯು ಯಾವ ಪಾತ್ರ ವಹಿಸುತ್ತದೆ ಎಂದು ಹಲವು ಉದಾಹರಣೆಗಳೊಂದಿಗೆ ನಮಗೆ ತೋರಿಸಿಕೊಡುತ್ತದೆ.
- ಯುವ ವಿದ್ಯಾರ್ಥಿಯಾಗಿ ಶಾಲೆ ಹಾಗೂ ಕಾಲೇಜುಗಳಲ್ಲಿ ಅವರ ಶೈಕ್ಷಣಿಕ ಸಾಧನೆ ಅಸಾಮಾನ್ಯವೇನೂ ಆಗಿರಲಿಲ್ಲ. ಆದರೆ ಅವರು ಬಹಳ ಓದುತ್ತಿದ್ದರು ಮತ್ತು ವನ್ಯಜೀವಿ ಮತ್ತು ಕಲೆಯಲ್ಲಿ ತೀವ್ರ ಆಸಕ್ತಿಯನ್ನು ಬೆಳೆಸಿಕೊಂಡರು.
- ಕ್ಷೇತ್ರ ಸಸ್ಯವಿಜ್ಞಾನಿ ಪಿ ಎಫ್ ಫೈಸನ್ ಅವರ ಮಾರ್ಗದರ್ಶನದಲ್ಲಿ ಅಧ್ಯಯನ ಮಾಡಲು ಸಿಕ್ಕಿದ ಅವಕಾಶವು ಈ ಅತಿ ಸಾಮಾನ್ಯ ವಿದ್ಯಾರ್ಥಿ ಸಸ್ಯ ಹಾಗೂ ಪ್ರಾಣಿ ಪ್ರಪಂಚದ ನಡುವಿನ ಹಲವು ಆಯಾಮಗಳ ಸಂಬಂಧದ ಕುರಿತಾದ ವಿಶೇಷ ನೋಟದೊಂದಿಗೆ ಅನುಭವಿ ನಿಸರ್ಗವಾದಿಯಾಗಿ ಬೆಳೆಯಲು ಸಹಕಾರಿಯಾಯಿತು.
- ಆಸಕ್ತಿ ಕೆರಳಿಸದಂತಹ ಹಲವು ನೀರಸ ಉದ್ಯೋಗಗಳಲ್ಲಿ ತೊಡಗಿದ ನಂತರ, ಕೃಷ್ಣನ್ ಅವರು ಸ್ವತಂತ್ರ ಬರೆಹಗಾರರಾಗಿ, ನಿಸರ್ಗವಾದಿಯಾಗಿ ಹಾಗೂ ಛಾಯಾಚಿತ್ರಗಾರರಾಗಿ ಜೀವನ ಸಾಗಿಸಲು ನಿರ್ಧರಿಸಿದರು.
- ತನ್ನ ಬರೆವಣಿಗೆಗಳ ಮೂಲಕ, ಕೃಷ್ಣನ್ ಅವರು ಮಾನವರು ಮತ್ತು ದೊಡ್ಡದಾಗಲಿ ಸಣ್ಣದಾಗಲಿ, ದೂರದ್ದಾಗಿರಲಿ, ಸಮೀಪದ್ದಿರಲಿ, ವರ್ಚಸ್ವಿಯಾಗಿರಲಿ, ಪರ್ಯೆಯಾ(ಸರ್ವೇ ಸಾಮಾನ್ಯ)ವಾಗಿರಲಿ, ಎಲ್ಲಾ ರೀತಿಯ ಪ್ರಾಣಿಗಳ ನಡುವೆ–ನೈತಿಕತೆಯಲ್ಲದಿದ್ದರೂ, ಒಂದು ಉನ್ನತ ಮಾನದಂಡವನ್ನು, ಸ್ಥಾಪಿಸಿದರು.
- ಸ್ವತಂತ್ರ ಭಾರತದಲ್ಲಿ ದೇಶಾಭಿಮಾನದ ಉತ್ಕಟ ಭಾವನೆಯೊಂದಿಗೆ ಅಭಿವೃದ್ಧಿ ಯೋಜನೆಗಳನ್ನು ರೂಪಿಸಿ ಕಾರ್ಯಗತಗೊಳಿಸಲು ಮುಂದಾಗುತ್ತಿದ್ದ ನಡೆಯನ್ನು, ಪ್ರಕೃತಿಯ ಉಳಿವಿಗೆ ಹೋರಾಡುತ್ತಿದ್ದ ಕೃಷ್ಣನ್‌ರವರು ವಿರೋಧಿಸಿ ವನ್ಯಜೀವಿ ಪ್ರದೇಶಗಳ ಸಾರ್ವಭೌಮತೆಗೆ ಭಂಗ ತರಬಾರತೆಂಬ ಸ್ಥೈರ್ಯದ ನಿಲುವನ್ನು ಪ್ರದರ್ಶಿಸಿದರು.
- ಮಕ್ಕಳನ್ನು ನಿಸರ್ಗದ ಖುಷಿಗೆ ಪರಿಚಯಿಸುವಲ್ಲಿ ಶಾಲಾ ಶಿಕ್ಷಣದ ಪಾತ್ರವನ್ನು ಕೃಷ್ಣನ್ ಅವರು ಪ್ರಶ್ನಿಸಿದರು. ದೇಶದಲ್ಲಿ ಹೇರಳವಾಗಿರುವ ಸಸ್ಯ ಹಾಗೂ ಪ್ರಾಣಿ ಸಂಪತ್ತಿನ ಕುರಿತು ಮಕ್ಕಳಲ್ಲಿ ಕುತೂಹಲವನ್ನು ಮೂಡಿಸಲು ಮತ್ತು ಆರೈಕೆ ಮಾಡಲು ಕೆಲವು ಮಹತ್ವದ ತಾತ್ವಿಕ ಮತ್ತು ಪ್ರಾಯೋಗಿಕ ಸಲಹೆಗಳನ್ನು ಅವರು ನೀಡಿದರು.

**ಟಿಪ್ಪಣಿಗಳು:**

1. ಮೂಲದಲ್ಲಿ ‘ಪರ್ರೈಯಾ’ ಎನ್ನುವ ಪದವು ದಕ್ಷಿಣ ಭಾರತದ, ಮದುವೆ ಹಾಗೂ ಅಂತ್ಯಕ್ರಿಯೆಗಳಲ್ಲಿ ಡೋಲು ಬಾರಿಸುವ ಒಂದು ಸ್ಥಳೀಯ ಬುಡಕಟ್ಟಿಗೆ ಬಳಸುವ ಪದವಾಗಿತ್ತು ಎಂದು ನಂಬಲಾಗಿದೆ. ಬಹುಬೇಗನೆ ಇದು ಜಾತಿ ಪದ್ಧತಿಯಲ್ಲಿ ಬಳಸುವ ನಿಂದನೆಯ ಪದವಾಗಿ ಬೆಳವಣಿಗೆ ಕಂಡಿತು. ಈ ಪದವನ್ನು ಕೃಷ್ಣನ್ ಅವರು ಬದುಕಿದ್ದ ಹಾಗೂ ಬರೆಯುತ್ತಿದ್ದ ಸಮಯದಲ್ಲಿ ಹೇರಳವಾಗಿ ಬಳಸಲಾಗುತ್ತಿತ್ತಾದರೂ, ಆ ಸಮಯದ ನಂತರ ಆ ಪದಕ್ಕಿರುವ ಅವಹೇಳನಕಾರಿ ಅರ್ಥದ ಕುರಿತಾದ ನಮ್ಮ ತಿಳುವಳಿಕೆ ಹೆಚ್ಚುತ್ತಾ ಹೋಗಿದೆ. ಮಾನವರಲ್ಲದ ಪ್ರಾಣಿಗಳ ಕುರಿತಾಗಿ ಈ ಪದದ ಬಳಕೆಗೆ ಹಲವು ಅರ್ಥಗಳಿರಲು ಸಾಧ್ಯವಿದೆ. ಅದರಲ್ಲಿ ‘ಸ್ಥಳೀಯ’, ‘ಸ್ವತಂತ್ರ ಚಲನೆಯ’, ‘ಹೊರಗಿನವರು’, ‘ಸರ್ವೇಸಾಮಾನ್ಯ’, ‘ಸಾಮಾನ್ಯ ಅಥವಾ ರೂಢಿಯ’, ‘ಆಕರ್ಷಣೀಯವಲ್ಲದ’, ‘ಜಾಡಮಾಲಿ’, ‘ಬಹಿಷ್ಕೃತರು’ ಅಥವಾ ಈ ಪದಗಳ ಸಂಯೋಜನೆಯ ಅರ್ಥವನ್ನು ಹೊಂದಿವೆ. ಈ ಲೇಖನದಲ್ಲಿ ಈ ಪದವನ್ನು ಉಳಿಸಿಕೊಳ್ಳಲಾಗಿದೆ ಏಕೆಂದರೆ ಇಂತಹ ಪ್ರಭೇದಗಳ ಮೇಲೆ ಕೃಷ್ಣನ್ ಅವರ ಆಸಕ್ತಿ ಈ ಪದದೊಂದಿಗೆ ಸಂಬಂಧಹೊಂದಿರುವ ಹೆಚ್ಚು ಅವಹೇಳನಕಾರಿ ಅರ್ಥದ ಗ್ರಹಿಕೆಗೂ ಮೀರಿರುವಂತಹುದಾಗಿದೆ. ಮಾತ್ರವಲ್ಲ, ಅವರ ಬರೆಹಗಳು ಹಾಗೂ ಅವಲೋಕನಗಳು ಇಂತಹ ಹಲವಾರು ದೃಷ್ಟಿಕೋನಗಳಿಗೆ ಸವಾಲೆಸೆಯುವ ಮತ್ತು ಅವುಗಳನ್ನು ಬದಲಾಯಿಸುವ ಕೆಲಸವನ್ನು ಮಾಡಿವೆ.
2. ಈ ಲೇಖನದ ಶೀರ್ಷಿಕೆಯ ಹಿನ್ನೆಲೆಯಲ್ಲಿ ಬಳಸಲಾದ ಚಿತ್ರದ ಮೂಲ: ತೊರೆಯಲ್ಲಿ ಭಾರತೀಯ ಆನೆಗಳು. ಕೃಪೆ: PickPik. URL: https://www.pickpik.com/elephants-family-group-river-wildlife-nature-mammal-5110. ಪರವಾನಗಿ: ರಾಯಧನ ಮುಕ್ತ.

**ಹೆಚ್ಚಿನ ಓದಿಗಾಗಿ:**


1. Bittu Sehgal (2017). ‘M Krishnan: In Remembrance and Gratitude’. Nature in Focus. URL: https://www.natureinfocus.in/environment/in-remembrance-and-gratitude.
2. Kumaran Sathasivam. ‘The national treasure that was M Krishnan’. Madras Musings. (Archive) Vol. XXII No. 14, November 1–15, 2012. URL: https://madrasmusings.com/Vol%2022%20No%2014/the-national-treasure-that-was-m-krishnan.html.



**ವರುಣ್ ಶರ್ಮ**ರವರು ದೆಹಲಿ ವಿಶ್ವವಿದ್ಯಾಲಯದಿಂದ ಸಮಾಜಶಾಸ್ತ್ರದಲ್ಲಿ ಪಿಎಚ್‌ಡಿ ಪದವಿಯನ್ನು ಪಡೆದಿದ್ದಾರೆ. ಐತಿಹಾಸಿಕ ದೃಷ್ಟಿಕೋನದಿಂದ ಮಾನವ–ವನ್ಯಜೀವಿ ಸಂಬಂಧಗಳನ್ನು ನೋಡಿರುವುದು ಅವರ ಸಂಶೋಧನೆಯ ವಿಶೇಷತೆಯಾಗಿದೆ. ಪ್ರಸಿದ್ಧ ಹಾಗೂ ನೆನಪಿನಿಂದ ಅಳಿದುಹೋಗಿರುವ ನಿಸರ್ಗವಾದಿಗಳ ಜೀವನ ಚರಿತ್ರೆಗಳು ಅವರಿಗೆ ಆಳವಾದ ಒಳನೋಟವನ್ನು ಒದಗಿಸುತ್ತವೆ. ಅವರನ್ನು ಇಲ್ಲಿ ಸಂಪರ್ಕಿಸಬಹುದು: varunwaters@gmail.com



ಅನುವಾದ: **ಸ್ಮಿತಾ ಭಟ್** | ಪರಿಶೀಲನೆ: **ಚಂದ್ರಿಕಾ ವಿಜಯೇಂದ್ರ**